ಜೀವ ಈಶ್ವರ ಜಗತ್

MAN GOD WORLD

K. VENKATARAMAIAH
119–150, SIXTH CROSS, 5TH MAIN
CHAMARAJPET, BANGALORE 2

ಜೀವ ಈಶ್ವರ ಜಗತ್

MAN GOD WORLD



ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಸ್ಸನಾತನಃ
ಈಶ್ವರಃ ಸರ್ವಭೂತಾನಾಂ ಹೃದ್ದೇಶೇರ್ಜುನ ತಿಷ್ಠತಿ

K. VENKATARAMAIAH
119-150, SIXTH CROSS, 5TH MAIN
CHAMARAJPET, BANGALORE 2

ಬೆಲೆ: 1-2-0

ಬೆಂಗಳೂರು ಪ್ರೆಸ್
ಮೈಸೂರು ರೋಡು, ಬೆಂಗಳೂರು ಸಿಟಿ
೧೯೫೪

PREFACE

The Government of India have invited authors and publishers to submit books for approval which should contain simply and interestingly written material upto 32 pages but not exceeding 48 pages. It has been stated that the books intended for the competition should help the readers to improve themselves socially and economically, and help to make them better citizens of India. The books should aim at arousing the intelligence of the people and create in them a scientific outlook, while retaining the spiritual values and the traditions of India.

The book by name "*Para Brahma Upadesa* by Gita-charya" which was written by me in the year 1951 deals with the spiritual values of the man and the traditions of India in Kannada which is a regional language in Mysore. It had been submitted for approval before issue to His Holiness Sri Sri Chandrasekhara Bharati Swamy of Sringeri Mutt, Sringeri, in Mysore State, the greatest living authority on the spiritual values and the traditions of India. He has conveyed his gracious approval to the contents of the book, through the Officer-in-charge of Sringeri Mutt, Sringeri, in letter dated 23rd November 1951 after getting the book examined by the Astan Pandits of the Sringeri Mutt. The encouragement given by His Holiness informing me in that letter, that the contents of the book are in accordance with Sastras, that my attempt to render the book in Kannada is a service to the lovers of knowledge and that my attempt is praiseworthy, has emboldened me to write in Kannada the present book by name *Jiva Eswara Jagat*.

The book *Jiva Eswara Jagat* claims to arouse the intelligence of the people and create in them the Indian traditional scientific outlook about the worldly pleasures,

the worldly possessions and the worldly problems which are beguiling mankind. It also helps the aspirants to become not only better citizens of free India but also become illustrious citizens of the free World by realising in their intellects the spiritual values of the Man, the God and the World.

The book makes people visualise that their minds are *Garbha Gudies*, and that their bodies are temples and helps them (i) to live pure lives in their homes as exemplary *Gruhastas* and *Gruhanies* and also, (ii) to live exemplary pure lives socially and economically without compromising the purity of lives in their homes. The Hindu Caste System is inherently a spiritualistic system to upgrade the man to attain Godhood while in the human body by following the paths of Raja Rishis, Maha Rishis and Brahma Rishis who lived pure, simple and peaceful lives in this world and who enjoyed the unlimited and undivided bliss unmixed with fear and grief. The Hindu Caste System which is inherently spiritualistic has no parallel in the other world religions which are inherently materialistic. But it has suffered a good lot of misrepresentation when India was under foreign domination continuously for several centuries so much so that the present generation in India both men and women, except a few minority, have become materialistic minded and have lost their faith in the traditional spiritual values of Hindu life and its aspirations.

I trust that this book which deals with the spiritual values of the Man, the God and the World and also the traditions of Indian Home Life, Civic Life and National Life, will be adjudged of sufficient value by the Government of India deserving publication in all the Indian languages.

119–150, Sixth Cross, 5th Main
Chamarajpet, BANGALORE 2.

K. VENKATARAMAIAH.

ವಿಷಯಾನುಕ್ರಮಣಿಕೆ

ಜೀವ ಈಶ್ವರ ಜಗತ್

MAN GOD WORLD

ಜೀವ ಈಶ್ವರ ಜಗತ್

MAN GOD WORLD

೧. ಜಗದ್ರೂಪದ ಈಶ್ವರ — ಈಶ್ವರ ಮಾಯಾಜಗತ್ತು

Revelation by Sri Krishna—Eswara in Human Body

ಗೀತ—[ಮಯಾತತಮಿದಂಸರ್ವಂ] ಜಗದವ್ಯಕ್ತಮೂರ್ತಿನಾ [ಜಗತ್ತು]
[ಮತ್ಸ್ಥಾನಿ] ಸರ್ವಭೂತಾನಿ ನ ಚಾಹಂತೇಷ್ವವಸ್ಥಿತಃ
[ನ ಚ ಮತ್ಸ್ಥಾನಿ] ಭೂತಾನಿ ಪಶ್ಯಮೇ ಯೋಗಮೈಶ್ವರಮ್ ॥

ಮತ್ಸ್ಥಾನಿ — ನಚಮತ್ಸ್ಥಾನಿ = ಇರ್ಕೆ ಇಲ್ಲದ ತೋರ್ಕೆಗಳು = ಅನಿರ್ದೇಶನಾದ ಈಶ್ವರನನ್ನು (ಪರಬ್ರಹ್ಮನನ್ನು) ನಿರ್ದೇಶಿಸುವ ದೃಶ್ಯಗಳು.

ಜಗತ್ತಿನಲ್ಲಿ ಮಾನವರು, ಜಗತ್ತು ಈಶ್ವರ ಸ್ವರೂಪವಾಗಿರುವ ರಹಸ್ಯವನ್ನೂ ಜಗತ್ತಿನಲ್ಲಿನ ಭೋಗೈಶ್ವರ್ಯಗಳು ಈಶ್ವರನ ಮಾಯೆಯಾಗಿರುವ ರಹಸ್ಯವನ್ನೂ ಅರಿಯದೆ, ಹುಟ್ಟಿದ ಮೊದಲು ಸಾಯುವ ವರಿವಿಗೂ ಅಶಾಂತಿ, ಅತೃಪ್ತಿ, ಮತ್ಸರ, ಅಸೂಯೆ, ಅಪನಂಬಿಕೆ, ಭಯ, ವ್ಯಥೆಗಳಿಂದ ಕೂಡಿ ಇರ್ಕೆ ಇಲ್ಲದ ತೋರ್ಕೆರೂಪದ ಭೋಗೈಶ್ವರ್ಯ ಪ್ರಸಕ್ತರಾಗಿ ಜೀವಮಾನವನ್ನು ಕಳೆಯುತ್ತಿರುತ್ತಾರೆ. ಅವರು ಜಗತ್ತಿನಲ್ಲಿನ ಭೋಗೈಶ್ವರ್ಯಗಳ ಅಸುಖ ರೂಪವನ್ನೂ ದುಃಖ ಯೋನಯಗಳಾಗಿರುವದನ್ನೂ ಅರಿತು ಇರುವದಿಲ್ಲ. ದುಃಖ ಭಯವರ್ಜಿತವಾದ ಅಖಂಡ ಆನಂದವು ಮಾನವನ ಹೃದ್ದೇಶಸ್ಥವಾಗಿರುವ ರಹಸ್ಯವನ್ನೂ ಜಗದ್ರೂಪನಾದ ಈಶ್ವರನು ಮಾನವನ ಹೃದ್ದೇಶಸ್ಥವಾಗಿರುವ ರಹಸ್ಯವನ್ನೂ ಅವರು ಅರಿತು ಇರುವದಿಲ್ಲ.

ಜಗತ್ತಿನಲ್ಲಿನ ಭೋಗೈಶ್ವರ್ಯಗಳಿಂದ ಮೋಹಿತರಾಗದೆ ಶರೀರಯಾತ್ರೆಯನ್ನು ಮಾಡುತ್ತಾ, ಜಗದ್ರೂಪನೂ ಹೃದ್ದೇಶಸ್ಥನೂ ಆದ ಈಶ್ವರನನ್ನು ದರ್ಶಿಸಿ ಅರ್ಚಿಸುವ ಮತ್ತು ಭಜಿಸುವ ಮಾನವರು, ದುರತ್ಯಯವಾದ

ಈಶ್ವರ ಮಾಯೆಯನ್ನು ಜಯಿಸಿ ಹೃದ್ದೇಶಸ್ಥವಾದ ದುಃಖ ಭಯವರ್ಜಿತವಾದ ಅಖಂಡ ಆನಂದವನ್ನು ಪಡೆಯಲು ಸಮರ್ಥರಾಗುತ್ತಾರೆ.

ಧೀಮಂತರು ಜಗದ್ರೂಪದ ಈಶ್ವರನನ್ನು ಅರ್ಚಿಸುತ್ತಾರೆ. ಭೋಗೈಶ್ವರ್ಯಪ್ರಸಕ್ತರು ಜಗತ್ತನ್ನು ಅರ್ಚಿಸುತ್ತಾರೆ. ಮಧ್ಯವರ್ತಿಗಳು ಈಶ್ವರ ಜಗತ್ತುಗಳೆರಡನ್ನೂ ಅರ್ಚಿಸುತ್ತಾರೆ. ಇವರಿಗೆ ಮಂದಾಧಿಕಾರಿಗಳೆಂದು ಹೆಸರು.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಜಗತ್ತಿನಲ್ಲಿನ ಭೋಗೈಶ್ವರ್ಯಗಳನ್ನು ಈಶ್ವರ ಮಾಯೆ ಎಂದು ಏಕೆ ಹೇಳಬೇಕು?

೨. ದುಃಖ ಭಯವರ್ಜಿತವಾದ ಅಖಂಡ ಆನಂದವು ಇರುವ ಸ್ಥಾನ ಯಾವುದು?

೩. ಈಶ್ವರನ ಸ್ವರೂಪವೇನು? ಅವನ ದರ್ಶನ ಸ್ಥಾನವು ಯಾವುದು?

೨. ಜಗದ್ವಿಷಯುಕವಾದ ವಿಜ್ಞಾನ ಪರಿಶೀಲನೆ

Scientific Research of the World

ಜಗದ್ವಿಷಯಕವಾದ ವಿಜ್ಞಾನ ಪರಿಶೀಲನೆಯು ಹಿಂದೂ ಸಂಪ್ರದಾಯಗಳನ್ನು ಅನುಷ್ಠಾನಮಾಡುವ ಕರ್ಮನಿಷ್ಠರೂ, ಜ್ಞಾನನಿಷ್ಠರೂ ಆದ ಉತ್ತಮ ಅಧಿಕಾರಿಗಳಿಂದ ಅನಾದಿಕಾಲದಿಂದಲೂ ನಡೆಯುತ್ತಲೇ ಇರುತ್ತದೆ. ಜಗತ್ರಯಗಳಲ್ಲಿನ ವಿಷಯ ಭೋಗಗಳೂ ವಿಷಯ ಭೋಗಗಳಿಂದ ಕೂಡಿದ ಜಗತ್ರಯಗಳೂ ಮೋಹದ ದೃಶ್ಯಗಳಾಗಿರುವ ರಹಸ್ಯವನ್ನೂ ಅವುಗಳು ಅಸುಖ ರೂಪದ ದುಃಖ ಯೋನಯಗಳಾಗಿರುವ ರಹಸ್ಯವನ್ನೂ ಪರಿಶೀಲಿಸಿ, ಮಾನವನು ಜೀವನ ಯಾತ್ರೆಯಲ್ಲಿ ಅವುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡದೆ ವೈರಾಗ್ಯನಿಷ್ಠೆಯಿಂದ (Voluntary poverty) ಪರಿತ್ಯಜಿಸಬೇಕೆಂದು ನಿಶ್ಚಯಕ್ಕೆ ಬಂದಿರುತ್ತಾರೆ.

ಯಾವ ಈಶ್ವರನಲ್ಲಿ ಮೋಹ ದೃಶ್ಯಗಳಾದ ಜಗತ್ರಯಗಳೂ ಅಲ್ಲಿನ ಇರ್ಕೆ ಇಲ್ಲದ ತೋರ್ಕೆರೂಪದ ಭೋಗೈಶ್ವರ್ಯಗಳೂ ಪ್ರತಿಷ್ಠವಾಗಿ ಪ್ರಕಾಶಿಸುತ್ತಿವೆಯೋ ಆ ಈಶ್ವರನು ಅಖಂಡ ಆನಂದ ಸ್ವರೂಪನಾಗಿರುವ

ರಹಸ್ಯವನ್ನೂ ಮತ್ತು ಆ ಈಶ್ವರನೇ ಮಾನವನ ಹೃದ್ದೇಶಸ್ಥನಾಗಿರುವ ರಹಸ್ಯವನ್ನೂ ಅರಿತು, ಹೃದ್ದೇಶಸ್ಥನಾದ ಆ ಈಶ್ವರ ದರ್ಶನದಿಂದ ಅಖಂಡ ಆನಂದವನ್ನು ಪಡೆಯುವದೇ ಮಾನವನು ಪಡೆಯಬೇಕಾದ ಪರಮ ಪುರುಷಾರ್ಥವೆಂದು ತೀರ್ಮಾನಿಸಿರುತ್ತಾರೆ. ಈ ರಹಸ್ಯವನ್ನು ಅರಿತು ಈಶ್ವರ ದರ್ಶನದಿಂದ ಹೃದ್ದೇಶಸ್ಥವಾದ ಅಖಂಡ ಆನಂದವನ್ನು ಶಾಶ್ವತ ವಾಗಿ ಪಡೆದ ವಿಶ್ವಾಮಿತ್ರ ಅತ್ರಿ ವಸಿಷ್ಠರಂತಹ ರಾಜರ್ಷಿ, ಮಹರ್ಷಿ, ಬ್ರಹ್ಮರ್ಷಿಗಳೇ ಭರತಖಂಡದಲ್ಲಿನ ಉತ್ತಮಾಧಿಕಾರಿಗಳಾದ ವೈಜ್ಞಾನಿಕ ಶಾಸ್ತ್ರಜ್ಞರು ಎಂಬುದನ್ನು ಗ್ರಹಿಸಬೇಕು. ಗುರುಪರಂಪರ ಪ್ರಾಪ್ತವಾದ ಈ ವೈಜ್ಞಾನಿಕ ರಹಸ್ಯವನ್ನು ಭರತಖಂಡದಲ್ಲಿನ ಅನೇಕರು ಅನಾದಿಕಾಲ ದಿಂದಲೂ ಗ್ರಹಿಸಿ ಅನುಷ್ಠಾನವನ್ನು ಮಾಡುತ್ತಿದ್ದಾರೆ.

ಪಾಶ್ಚಿಮಾತ್ಯ ವೈಜ್ಞಾನಿಕರ ಪರಿಶೋಧನೆಯು ಹೃದಯಸ್ಥನಾದ ಈಶ್ವರನ ದರ್ಶನದಿಂದ ದುಃಖ ಭಯವರ್ಜಿತವಾದ ಅಖಂಡ ಆನಂದವನ್ನು ಶಾಶ್ವತವಾಗಿ ಪಡೆಯಲು ಆಗಲೀ, ಅಥವಾ ಜಗತ್ರಯಗಳಲ್ಲಿನ ಭೋಗೈ ಶ್ವರ್ಯಗಳ ಯಥಾರ್ಥವನ್ನು ತಿಳಿಯಲು ಆಗಲೀ ಮಾಡುತ್ತಿಲ್ಲ. ಅವರ ಪರಿಶೋಧನೆಯು, ಮೋಹದೃಶ್ಯಗಳಾದ ಇಹಲೋಕದಲ್ಲಿನ ಭೋಗೈಶ್ವರ್ಯ ಗಳನ್ನು ಶರೀರ ಸುಖಕ್ಕಾಗಿ ಪಡೆಯುವದೇ ಆಗಿರುತ್ತದೆ. ಆದುದರಿಂದ ಪಾಶ್ಚಿಮಾತ್ಯ ವೈಜ್ಞಾನಿಕರಿಗೆ ದರ್ಶಿತವಾಗುವ ಭೋಗ ವಿಷಯಗಳ ಭೋಕ್ತೃತ್ವದ ಸುಖವು ಭರತಖಂಡದ ವೈಜ್ಞಾನಿಕರಿಗೆ ದರ್ಶಿತವಾಗುವದಿಲ್ಲ. ಭರತಖಂಡದ ವೈಜ್ಞಾನಿಕರಿಗೆ ದರ್ಶಿತವಾಗುವ ಹೃದ್ದೇಶಸ್ಥವಾದ ಅಖಂಡ ಆನಂದವು ಪಾಶ್ಚಿಮಾತ್ಯ ವೈಜ್ಞಾನಿಕರಿಗೆ ದರ್ಶಿತವಾಗುವದಿಲ್ಲ. ಪಾಶ್ಚಿ ಮಾತ್ಯ ವೈಜ್ಞಾನಿಗಳಿಗೆ ಇರುವ ನಿತ್ಯವೈರಿಗಳು ಭೋಗೈಶ್ವರ್ಯಪ್ರಸಕ್ತ ವಾದ ಬಾಹ್ಯದಲ್ಲಿನ ಇತರ ಜನಾಂಗದವರು. ಇವರ ನಿಗ್ರಹಕ್ಕೆ ಬೇಕಾ ದುದು ಶಸ್ತ್ರಗಳು, ಅಸ್ತ್ರಗಳು, ಆಟಂಬಾಂಬುಗಳು, ಹೈಡ್ರೊಜನ್ ಬಾಂಬು ಗಳು. ಭಾರತೀಯ ವೈಜ್ಞಾನಿಕರಿಗೆ ಇರುವ ನಿತ್ಯವೈರಿಗಳು ಕಾಮ ಕ್ರೋಧ ಲೋಭ ಅಜ್ಞಾನರೂಪದ ಹೃದ್ದೇಶಸ್ಥವಾದ ವೈರಿಗಳು. ಇವುಗಳ ನಿಗ್ರಹಕ್ಕೆ ಬೇಕಾದುದು ಅಸಂಗಶಸ್ತ್ರ ಜ್ಞಾನಅಸಿಗಳು. ಪಾಶ್ಚಿಮಾತ್ಯರಿಗೆ ಪ್ರಧಾನವಾಗಿರುವದು ಆರ್ಥಿಕ ಜೀವನ. ಭಾರತೀಯರಿಗೆ ಪ್ರಧಾನ ವಾಗಿರುವದು ನೈತಿಕ ಜೀವನ.

ಈ ರೀತಿಯ ವ್ಯತ್ಯಾಸ ದರ್ಶನಗಳೇ ಪಾಶ್ಚಿಮಾತ್ಯರ ಮತ್ತು ಭಾರತೀಯರ ಗೃಹ ಜೀವನ ಸಮಾಜ ಜೀವನಗಳಲ್ಲಿನ ವ್ಯತ್ಯಾಸಗಳಿಗೆ ಕಾರಣವಾಗಿರುತ್ತವೆ.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಭಾರತೀಯರಿಗೂ ಪಾಶ್ಚಿಮಾತ್ಯರಿಗೂ ಇರುವ ಪರಮ ಪುರುಷಾರ್ಥಗಳು ಯಾವುವು?

೨. ಭಾರತೀಯರ ಮತ್ತು ಪಾಶ್ಚಿಮಾತ್ಯರ ನಿತ್ಯವೈರಿಗಳು ಯಾರು? ಇವರನ್ನು ನಿಗ್ರಹಿಸುವದು ಹೇಗೆ? ದುರತ್ಯಯವಾದ ವೈರಿಗಳನ್ನು ನಿಗ್ರಹಿಸಲು ಯಾವ ಸಹಾಯವು ಆವಶ್ಯಕ?

೩. ಗೃಹಜೀವನದಲ್ಲಿ ಪಾಶ್ಚಿಮಾತ್ಯರಿಗೂ ಭಾರತೀಯರಿಗೂ ಇರುವ ವ್ಯತ್ಯಾಸ ದರ್ಶನಗಳೇನು?

೩. ಗೀತಾಮೃತದ ಮಹತ್ವ

Greatness of the Amrita in Bhagavad Gita

ಸರ್ವೋಽಪನಿಷದೋಗಾವೋ [ದೋಗ್ಧಾಗೋಪಾಲನಂದನಃ] [ಗುರು]
[ಪಾರ್ಥೋವತ್ಸಸ್ಸುಧೀರ್ಭೋಕ್ತಾ] ದುಗ್ಧಂ ಗೀತಾಮೃತಂ [ಮಹತ್] [ಶಿಷ್ಯ]

ಮನುಷ್ಯದೇಹದ ಶ್ರೀ ಕೃಷ್ಣನು ಸರ್ವೋಪನಿಷತ್ತುಗಳಂತೆ, ಧರ್ಮಾಮೃತ, ಜ್ಞಾನಾಮೃತ, ವಿಜ್ಞಾನಾಮೃತ ಭರಿತನು. ಭೋಕ್ತೃಗಳಿಗೆ, ಗೋವಿನಂತೆ, ತನ್ನಲ್ಲಿ ಭರಿತವಾದ ಅಖಂಡ ಆನಂದವನ್ನು ಕರೆದು ತುಷ್ಟಿ ಸಂತುಷ್ಟಿಗಳನ್ನುಂಟುಮಾಡುವ ಅಖಂಡ ಆನಂದ ಸ್ವರೂಪನು. ಗುರು ಶಿಷ್ಯರಾದ ಶ್ರೀ ಕೃಷ್ಣ ಅರ್ಜುನರ ಸಂವಾದದಿಂದ ಕರೆಯಲ್ಪಟ್ಟ ಅಮೃತವನ್ನು ಪಾನಮಾಡಿ ಅಖಂಡ ಆನಂದದಿಂದ ತೃಪ್ತಿ ಸಂತೃಪ್ತಿಗಳನ್ನು ಪಡೆದ ಭೋಕ್ತೃವೇ ಮನುಷ್ಯದೇಹದ ಅರ್ಜುನನು. ಗೀತಾಮೃತವು ಭೋಕ್ತೃವಾದ ಶಿಷ್ಯನನ್ನು ಅಖಂಡ ಆನಂದ ಸ್ವರೂಪನನ್ನಾಗಿ ಮಾಡುವದಲ್ಲದೆ, ತನ್ನಲ್ಲಿ ಭರಿತವಾದ ಅಖಂಡ ಆನಂದವನ್ನು ಇತರ ಭೋಕ್ತೃಗಳಿಗೆ ದೋಗ್ಧಮಾಡಿ ತುಷ್ಟಿ ಸಂತುಷ್ಟಿಗಳನ್ನುಂಟುಮಾಡುವ ಜಗದ್ಗುರುವನ್ನಾಗಿ ಮಾಡುವ ಮಹತ್ತಿನಿಂದ ಕೂಡಿರುತ್ತದೆ.

ತ್ರೇತಾಯುಗದಲ್ಲಿದ್ದ ಸೂರ್ಯವಂಶದ ರಾಜನಾದ ವಿವಸ್ವನು, ದ್ವಾಪರಯುಗದ ಚಂದ್ರವಂಶದ ಅರ್ಜುನನಂತೆಯೇ ಜಗದ್ಗುರುವಾದ ಶ್ರೀ ಕೃಷ್ಣನಿಂದ ದೋಗ್ಧವಾದ ಸುಧೀರ್ಭೋಕ್ತನಾಗಿ ತುಷ್ಟಿ ಸಂತುಷ್ಟಿ ಗಳನ್ನು ಪಡೆದು ಅಖಂಡ ಆನಂದ ಸ್ವರೂಪನಾದ ಜಗದ್ಗುರುವಾದನು. ಜಗದ್ಗುರುವಾದ ವಿವಸ್ವನಿಂದ ದೋಗ್ಧವಾದ ಅಖಂಡ ಆನಂದವನ್ನು ಪಾನಮಾಡಿದ ಭೋಕ್ತೃವೇ ಅವನ ಮಗನೂ ಶಿಷ್ಯನೂ ಆದ ಮನುವು. ಜಗದ್ಗುರುವಾದ ಮನುವಿನಿಂದ ದೋಗ್ಧವಾದ ಅಖಂಡ ಆನಂದವನ್ನು ಪಾನಮಾಡಿದ ಭೋಕ್ತೃವೇ ಅವನ ಮಗನೂ ಶಿಷ್ಯನೂ ಆದ ಇಕ್ಷ್ವಾಕು ರಾಜನು. ಈ ರೀತಿಯಲ್ಲಿ ಅನೇಕ ರಾಜರ್ಷಿಗಳೂ, ಮಹರ್ಷಿಗಳೂ, ಬ್ರಹ್ಮರ್ಷಿಗಳೂ ಪರಂಪರ ಪ್ರಾಪ್ತವಾದ ಅಮೃತಪಾನದ ರಹಸ್ಯವನ್ನು ತಿಳಿದಿದ್ದರು. ಈ ರೀತಿಯಲ್ಲಿ ಅಮೃತಪಾನವನ್ನು ಮಾಡಿಸುವ, ಅಮೃತ ಪಾನವನ್ನು ಮಾಡುವ, ಗುರುಶಿಷ್ಯರ ಪರಂಪರೆಯು ಯುಗ ಯುಗಾಂತರ ದಿಂದ ಜಗತ್ತಿನಲ್ಲಿ ನಡೆದುಕೊಂಡು ಬಂದಿರುತ್ತದೆ.

ಉಪದೇಶ—**[ಮಯ್ಯೇವ ಮನ ಆಧತ್ಸ್ವ] ಮಯಿ ಬುದ್ಧಿಂ ನಿವೇಶಯ**

ನಿವಸಿಷ್ಯಸಿ ಮಯ್ಯೇವ [ಅತ ಊರ್ಧ್ವಂ ನ ಸಂಶಯಃ]

[ಮನ್ಮನಾಭವ] ಮದ್ಭಕ್ತೋ ಮದ್ಯಾಜೀ [ಮಾಂ ನಮಸ್ಕುರು]

[ಮಾಮೇವೈಷ್ಯಸಿ] ಸತ್ಯಂ ತೇ ಪ್ರತಿಜಾನೇ ಪ್ರಿಯೋಸಿಮೇ.

ಶೃತಿ— **ಅಹಂ ಬ್ರಹ್ಮ ಅಸ್ಮಿ; ತತ್ವಮಸಿ.**

ತಾತ್ಪರ್ಯ.— ಮನುಷ್ಯ ದೇಹದ ನಾನು ಅಖಂಡ ಆನಂದ ಸ್ವರೂಪನೂ, ಜಗದ್ರೂಪನೂ ಆದ ಪರಬ್ರಹ್ಮನಾಗಿರುತ್ತೇನೆ. ಲೋಕ ದಲ್ಲಿನ ಮೂಢರು ನಾನು ಅಖಂಡ ಆನಂದ ಸ್ವರೂಪನಾದ ಪರಬ್ರಹ್ಮ ನಾಗಿರುವದನ್ನು ಅರಿತು ಇರುವದಿಲ್ಲ. ನೀನು ಈ ರಹಸ್ಯವನ್ನು ನನ್ನಿಂದಲೇ ಅರಿತು ನಿನ್ನ ಮನಸ್ಸನ್ನು ಪರಬ್ರಹ್ಮನಾದ ನನ್ನಲ್ಲಿಯೇ ಇಡು. ನಿನ್ನ ಬುದ್ಧಿಯು ನನ್ನಲ್ಲೇ ನಿವೇಶಿಸಲಿ. ನನ್ನಲ್ಲಿ ನಿವೇಶಿಸುವುದರಿಂದ ನಿನ್ನ ಮನಬುದ್ಧಿಗಳ ಮೂಢತ್ವವು ನಾಶವಾಗಿ ನಾನು ಅಖಂಡ ಆನಂದ ಸ್ವರೂಪ ನಾದ ಪರಬ್ರಹ್ಮನಾಗಿರುವಂತೆಯೇ ನೀನು ಅಖಂಡ ಆನಂದ ಸ್ವರೂಪ ನಾದ ಪರಬ್ರಹ್ಮನಾಗಿರುವುದನ್ನು ದರ್ಶಿಸುತ್ತೀಯೆ. ನೀನು ಸಂಶಯ ಪಡಬೇಡ. ನನ್ನ ಮಾತು ಸತ್ಯ.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಗುರುವಿನ ಅಮೃತರೂಪದ ಉಪದೇಶವೇನು ?

೨. ಗುರುಶಿಷ್ಯರ ಪರಂಪರೆಯು ಯಾವ ರೀತಿಯಲ್ಲಿ ಯುಗ ಯುಗಾಂತರದಿಂದ ನಡೆಯುತ್ತಿರುತ್ತದೆ?

೪. ಮನುಷ್ಯದೇಹದ ಶ್ರೀ ಕೃಷ್ಣನ ಧ್ಯಾನ ಕ್ರಮ

Visualising the Vishnu in Krishna's Human Body

ಶುಕ್ಲಾಂಬರಧರಂ [ವಿಷ್ಣುಂ] ಶಶಿವರ್ಣಂ [ಚತುರ್ಭುಜಂ] [ಶ್ರೀ ಕೃಷ್ಣ]
[ಪ್ರಸನ್ನವದನಂ] ಧ್ಯಾಯೇತ್ ಸರ್ವವಿಘ್ನೋಪ ಶಾಂತಯೇ [ಆನಂದ ರೂಪ]

ತಾತ್ಪರ್ಯ.—ಸರ್ವ ಲೋಕಗಳನ್ನು ಆಕಾಶದಂತೆ ವ್ಯಾಪಿಸಿ ಧರಿಸಿರುವ ವಿಷ್ಣುವೇ ಮನುಷ್ಯದೇಹದ ಶ್ರೀ ಕೃಷ್ಣನು ಎಂದೂ ಪ್ರಸನ್ನವದನನಾದ ಅಖಂಡ ಆನಂದ ಪುರುಷನೆಂದೂ ಅರಿತು ಧ್ಯಾನಮಾಡುವುದರಿಂದ (ದರ್ಶಿಸುವುದರಿಂದ) ಜೀವರುಗಳಾದ ನಮ್ಮ ಹೃದ್ದೇಶಸ್ಥವಾದ ಅಖಂಡ ಆನಂದ ಅನುಭವಕ್ಕೆ ಇರುವ ಸರ್ವ ಪ್ರತಿಬಂಧಕಗಳೂ ನಾಶವಾಗಿ ಹೃದ್ದೇಶಸ್ಥವಾದ ಅಖಂಡ ಆನಂದವನ್ನು ನಾವು ಅನುಭವಿಸುತ್ತೇವೆ. ಆದುದರಿಂದ ಮನುಷ್ಯದೇಹದ ಶ್ರೀ ಕೃಷ್ಣನನ್ನು ಲೋಕತ್ರಯ ವ್ಯಾಪಕನಾದ ವಿಷ್ಣುವೆಂದೂ ಅಖಂಡ ಆನಂದ ಪುರುಷನೆಂದೂ ಅರಿತು ದರ್ಶಿಸುತ್ತೇನೆ. ಇದಕ್ಕೆ ದಿವ್ಯಚಕ್ಷುಷರ ದರ್ಶನಕ್ರಮ ಎಂದು ಹೆಸರು. ಶ್ರೀ ಕೃಷ್ಣನನ್ನು ವಿಷ್ಣುವೆಂದೂ ಆನಂದ ರೂಪನೆಂದೂ ದರ್ಶಿಸದೆ ಮನುಷ್ಯದೇಹದ ವಸುದೇವಪುತ್ರನೆಂದು ದರ್ಶಿಸುವ ದರ್ಶನಕ್ಕೆ ಮೋಹದರ್ಶನವೆಂದು ಹೆಸರು.

ನಾವು ದರ್ಶಿಸುವ ಘಟಗಳಲ್ಲಿ ಘಟಾಕಾಶ, ಮಹಾಕಾಶಗಳೆಂದು ಎರಡು ಆಕಾಶಗಳು ಹೇಗೆ ಇರದೆ ಪ್ರತಿಯೊಂದು ಘಟದಲ್ಲೂ ಅಖಂಡವಾದ ಅವಿಭಕ್ತವಾದ ಏಕ ಆಕಾಶವು ಹೇಗೆ ಇರುತ್ತದೆಯೋ ಅದರಂತೆಯೇ ಮನುಷ್ಯ ದೇಹದ ಶ್ರೀ ಕೃಷ್ಣನ ಹೃದ್ದೇಶದಲ್ಲಿ ಇಬ್ಬರು ಪುರುಷರು ಇರುವದಿಲ್ಲ. ಲೋಕತ್ರಯ ವ್ಯಾಪಕನಾದ ಅವಿಭಕ್ತನಾದ ಆನಂದ ರೂಪದ ಏಕ ಪುರುಷನು ಮಾತ್ರ ಪ್ರತಿಷ್ಠನಾಗಿರುತ್ತಾನೆ.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಮನುಷ್ಯ ದೇಹದ ಶ್ರೀ ಕೃಷ್ಣನನ್ನು ಹೇಗೆ ಧ್ಯಾನಮಾಡಬೇಕು?

೨. ನಾವು ದರ್ಶಿಸುವ ಘಟಗಳಲ್ಲಿ ಮಹಾಕಾಶ ಘಟಾಕಾಶಗಳೆಂದು ಎರಡು ಆಕಾಶಗಳು ಇರುತ್ತವೆಯೋ? ಮೋಹದರ್ಶನದ ಲಕ್ಷಣಗಳೇನು?

೫. ಮನುಷ್ಯದೇಹದ ಜಗದ್ಗುರುವಿನ ನಮಸ್ಕಾರ ಕ್ರಮ

Visualising the Para Brahman in the World Teacher's Human Body

ಗುರು [ಬ್ರಹ್ಮ] ಗುರು [ರ್ವಿಷ್ಣು] ಗುರುರೇವ [ಮಹೇಶ್ವರಃ]
ಗುರು [ಸಾಕ್ಷಾತ್ಪರಬ್ರಹ್ಮ] ತಸ್ಮೈಶ್ರೀ ಗುರುವೇ [ನಮಃ]

ತಾತ್ಪರ್ಯ.—ಮನುಷ್ಯ ದೇಹದ ಗುರುವಿನ ಹೃದ್ದೇಶಸ್ಥನೇ ಬ್ರಹ್ಮ ಲೋಕದ ಬ್ರಹ್ಮನು. ಮನುಷ್ಯ ದೇಹದ ಗುರುವಿನ ಹೃದ್ದೇಶಸ್ಥನೇ ವೈಕುಂಠಲೋಕದ ವಿಷ್ಣುವು. ಮನುಷ್ಯ ದೇಹದ ಗುರುವಿನ ಹೃದ್ದೇಶಸ್ಥನೇ ಕೈಲಾಸಲೋಕದ ಮಹೇಶ್ವರನು. ಮನುಷ್ಯ ದೇಹದ ಗುರುವಿನ ಹೃದ್ದೇಶ ಸ್ಥನೇ ಬ್ರಹ್ಮ ವಿಷ್ಣು ಮಹೇಶ್ವರರಿಗೆ ಪರಂ ಆದ ಅಂದರೆ ಅವರುಗಳಿಂದ ನಿರ್ದೇಶಿಸಲ್ಪಡುವ ಸರ್ವಗತನಾದ ಸಾಕ್ಷಾತ್ಪರಬ್ರಹ್ಮನು. ಆದುದರಿಂದ ಮನುಷ್ಯ ದೇಹದ ಗುರುವನ್ನು ಬ್ರಹ್ಮ ವಿಷ್ಣು ಮಹೇಶ್ವರರಿಗೆ ಪರಂ ಆದ ಸರ್ವಗತನಾದ ಸಾಕ್ಷಾತ್ಪರಬ್ರಹ್ಮನೆಂದು ದರ್ಶಿಸಿ ನಮಸ್ಕರಿಸುತ್ತೇನೆ. ಇದಕ್ಕೆ ಜ್ಞಾನಚಕ್ಷುಷರ ನಮಸ್ಕಾರ ಕ್ರಮ ಎಂದು ಹೆಸರು. ಗುರುವನ್ನು ಸರ್ವಗತನಾದ ಸಾಕ್ಷಾತ್ಪರಬ್ರಹ್ಮನೆಂದು ದರ್ಶಿಸದೆ ಮನುಷ್ಯ ಮಾತ್ರ ನೆಂದು ದರ್ಶಿಸಿ ಮಾಡುವ ನಮಸ್ಕಾರಕ್ಕೆ ಮೋಹದರ್ಶನದ ನಮಸ್ಕಾರ ಎಂದು ಹೆಸರು.

ಗುರುವಿನ ಹೃದ್ದೇಶದಲ್ಲಿ ಅನೇಕ ಪುರುಷರು ಪ್ರತಿಷ್ಠರಾಗಿರುವದಿಲ್ಲ. ಪ್ರತಿಷ್ಠನಾಗಿರುವವನು ಸರ್ವಗತನಾದ ಸಾಕ್ಷಾತ್ತಾದ ಪರಬ್ರಹ್ಮನೊಬ್ಬನೇ ಆಗಿರುವದರಿಂದ ಜೀವ ಬ್ರಹ್ಮ ವಿಷ್ಣು ಮಹೇಶ್ವರ ಇತ್ಯಾದಿ ನಾಮಗಳನ್ನು ಏಕ ಪುರುಷನಾದ ಸರ್ವಗತ ಬ್ರಹ್ಮನನ್ನು ನಿರ್ದೇಶಿಸಿ ಬೋಧಿಸುವ ಅನೇಕ ನಾಮಗಳೆಂದು ಗ್ರಹಿಸಬೇಕು.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಮನುಷ್ಯ ದೇಹದ ಗುರುವನ್ನು ಹೇಗೆ ದರ್ಶಿಸಿ ನಮಸ್ಕರಿಸಬೇಕು?

೨. ಅನಿರ್ದೇಶನಾದ ಸರ್ವಗತ ಬ್ರಹ್ಮನನ್ನು ನಿರ್ದೇಶಿಸಿ ದರ್ಶಿಸುವದು ಹೇಗೆ?

೬. ಗೀತಾಪ್ರೋಕ್ತ ಈಶ್ವರನ ಅರ್ಚನೆ

Gita Method of Eswara Worship

ಜಗತ್ತಿನಲ್ಲಿನ ಸರ್ವ ಮಾನವರ ಹೃದ್ದೇಶಸ್ಥವಾದ ಕಾಮ ಕ್ರೋಧ ಲೋಭಗಳೂ ಅವುಗಳ ಮಾತೃಸ್ಥಾನವಾದ ಅಜ್ಞಾನವೂ, ಹೃದ್ದೇಶಸ್ಥವಾದ ದುಃಖ ಭಯವರ್ಜಿತವಾದ ಅಖಂಡ ಆನಂದವನ್ನೂ ಮತ್ತು ಹೃದ್ದೇಶಸ್ಥನಾದ ಈಶ್ವರನ ದರ್ಶನವನ್ನೂ ಪಡೆಯಲು ಪ್ರತಿಬಂಧಕವಾಗಿ, ದುರತ್ಯಯವಾದ ಶತ್ರುಗಳಂತೆ ವರ್ತಿಸುತ್ತಾ, ಅಘಟಘಟನಾ ಶಕ್ತಿಯಿಂದ ಕೂಡಿ "ಈಶ್ವರ ಮಾಯಾ" ಎಂಬ ಹೆಸರಿನಿಂದ ಗೀತಾ ಪ್ರಸಿದ್ಧವಾಗಿರುತ್ತದೆ.

ಅಖಂಡ ಆನಂದವು ತನ್ನ ಹೃದ್ದೇಶಸ್ಥವಾಗಿರುವ ರಹಸ್ಯವನ್ನು ಅರಿಯದ ಮಾನವರು, ಅಸುಖ ರೂಪದ ದುಃಖ ಯೋನಯಗಳಾದ ಭೋಗೈಶ್ವರ್ಯಗಳನ್ನೇ ಇಹದಲ್ಲೂ ಪರದಲ್ಲೂ ಪಡೆಯಬೇಕಾದ ಪರಮ ಪುರುಷಾರ್ಥವೆಂದು ಭ್ರಮಿಸಿ ಮೋಹದಿಂದ ಕಾಮ ಕ್ರೋಧ ಲೋಭಗಳ ವಶವಾಗಿ ಧಾವಂತವನ್ನು ಪಡುತ್ತಿರುತ್ತಾರೆ. ಅಸುಖ ರೂಪದ ದುಃಖ ಯೋನಯಗಳಾಗಿದ್ದರೂ ಭೋಗೈಶ್ವರ್ಯಗಳಂತೆ ಮೋಹವನ್ನುಂಟು ಮಾಡುತ್ತಿರುವ ಭೋಗೈಶ್ವರ್ಯ ರೂಪದ ಜಗತ್ತೇ ಜಗದ್ವ್ಯಾಪಕನಾದ ಈಶ್ವರನ ದರ್ಶನಕ್ಕೆ ಪ್ರತಿಬಂಧಕವಾಗಿ "ಈಶ್ವರ ಮಾಯಾ ಜಗತ್ತು" ಎಂಬ ಹೆಸರಿನಿಂದ ಗೀತಾಪ್ರಸಿದ್ಧವಾಗಿರುತ್ತದೆ. ಜಗತ್ತನ್ನು ಈಶ್ವರನು ವ್ಯಾಪಿಸಿ ಧರಿಸಿದ್ದರೂ, ಜಗತ್ತನ್ನು ಈಶ್ವರನ ಸ್ವರೂಪವೆಂದು ದರ್ಶಿಸದೆ ಭೋಗೈಶ್ವರ್ಯ ರೂಪದ ಜಗತ್ತು ಎಂದು ದರ್ಶಿಸುವ ದರ್ಶನಕ್ಕೆ ಮೋಹ ದರ್ಶನವೆಂದು ಹೆಸರು.

ಗೀತ—ತ್ರಿಭಿರ್ಗುಣ ಮಯೈರ್ಭಾವೈರೇಭಿಃ [ಸರ್ವಮಿದಂ ಜಗತ್] [ಜಗತ್]
[ಮೋಹಿತಂ] ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ [ಮೋಹದರ್ಶನ]
ದೈವೀಹ್ಯೇಷಾಗುಣಮಯೀ [ಮಮ ಮಾಯಾ] ದುರತ್ಯಯಾ [ಈಶ್ವರಮಾಯ]
[ಮಾಮೇವ ಯೇ ಪ್ರಪದ್ಯಂತೇ] ಮಾಯಾಮೇತಾಂತರಂತಿತೇ [ಈಶ್ವರ]
[ಯೋ] ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ [ಈಶ್ವರಃ] [ವಿಶ್ವರೂಪ]
[ಈಶ್ವರಃ] ಸರ್ವಭೂತಾನಾಂ [ಹೃದ್ದೇಶೇರ್ಜುನ ತಿಷ್ಠತಿ] [ಹೃದ್ದೇಶಸ್ಥ]
ಶ್ರುತಿ—ದೇಹೋ ದೇವಾಲಯಃಪ್ರೋಕ್ತೋ [ಜೀವೋದೇವಸ್ಸನಾತನಃ] ಈಶ್ವರ

ಮಹಾಕಾಶ ಘಟಾಕಾಶವತ್ ಲೋಕತ್ರಯ ವ್ಯಾಪಕನಾದ ಈಶ್ವರನೇ ಜೀವರ ಹೃದ್ದೇಶದಲ್ಲಿ ಪ್ರತಿಷ್ಠನಾಗಿರುವದರಿಂದ, ಜೀವರ ದೇಹಗಳನ್ನು ಈಶ್ವರನ ದೇವಾಲಯಗಳೆಂದೂ ಜೀವರ ಹೃದ್ದೇಶಗಳನ್ನು ಈಶ್ವರ ದೇವಾಲಯದಲ್ಲಿನ ಗರ್ಭಗುಡಿಗಳೆಂದೂ ದರ್ಶಿಸಿ ಹೃದ್ದೇಶಸ್ಥನಾದ ಈಶ್ವರನನ್ನು ಅರ್ಚಿಸಬೇಕು. ಜೀವರ ಹೃದ್ದೇಶಸ್ಥನಾದ ಈಶ್ವರನೇ ಗೀತಾಪ್ರೋಕ್ತನಾದ ಈಶ್ವರನು ಎಂಬುದನ್ನು ಗ್ರಹಿಸಬೇಕು. ಗೀತಾಪ್ರೋಕ್ತ ಈಶ್ವರನ ಪೂಜಾಸಾಮಗ್ರಿಗಳನ್ನು "ಪತ್ರಂ ಪುಷ್ಪಂ ಫಲಂತೋಯಂ" ಎಂದು ಹೇಳಿದ್ದರೂ, ಮಾನವರ ಸ್ವಭಾವ ನಿಯತವಾದ ಕೇವಲ ಶಾರೀರ ಕರ್ಮಗಳೇ ಶ್ರೇಷ್ಠತರವಾದ ಅರ್ಚನಾ ಸಾಮಗ್ರಿಗಳು ಆಗಿರುತ್ತವೆ.

[ಯತಃ] ಪ್ರವೃತ್ತಿ ಭೂತಾನಾಂ [ಯೇನ] ಸರ್ವಮಿದಂ ತತಮ್ [ಈಶ್ವರ]
[ಸ್ವಕರ್ಮಣಾ ತಮಭ್ಯರ್ಚ] ಸಿದ್ಧಿಂ ವಿಂದತಿ ಮಾನವಃ [ಅರ್ಚನಾ ಸಾಮಗ್ರಿ]
[ಸ್ವೇಸ್ವೇ ಕರ್ಮಣ್ಯಭಿರತಃ] ಸಂಸಿದ್ಧಿಂ ಲಭತೇ ನರಃ [ಅರ್ಚನಾ ಸಾಮಗ್ರಿ]

ಗೀತಾಪ್ರೋಕ್ತ ಈಶ್ವರನನ್ನು ಮಂದಾಧಿಕಾರಿಗಳು ಇರ್ಕೆ ಇಲ್ಲದ ತೋರ್ಕೆ ರೂಪದ ಭೋಗೈಶ್ವರ್ಯಗಳಿಗಾಗಿಯೂ (ಸಿದ್ಧಿ) ಮತ್ತು ಉತ್ತಮಾಧಿಕಾರಿಗಳು ಹೃದ್ದೇಶಸ್ಥವಾದ ದುಃಖ ಭಯವರ್ಜಿತವಾದ ಶಾಶ್ವತವಾದ ಅಖಂಡ ಆನಂದ ಪ್ರಾಪ್ತಿಗಾಗಿಯೂ (ಸಂಸಿದ್ಧಿ) ಅರ್ಚಿಸುತ್ತಾರೆ.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಗೀತಾಪ್ರೋಕ್ತನಾದ ಈಶ್ವರನು ಯಾರು—ಅರ್ಚನಾ ಸಾಮಗ್ರಿಗಳಾವವು?
೨. ಸಿದ್ಧಿ ಸಂಸಿದ್ಧಿಗಳೆಂದರೆ ಏನು?

೭. ಚತುರ್ವರ್ಣ ದೇಹಗಳು ಭಗವಂತನ ಸೃಷ್ಟಿ
Traditional Fourfold Casteism

ಈಶ್ವರನ ಅರ್ಚನೆಯಿಂದ ಈಶ್ವರನ ಸಹಾಯವನ್ನು ಪಡೆಯದ ಮಾನವರಿಗೆ ದುರತ್ಯಯವಾದ ಕಾಮ ಕ್ರೋಧ ಲೋಭ ಅಜ್ಞಾನಗಳನ್ನು ಜಯಿಸಲು ಶಕ್ಯವಿರುವದಿಲ್ಲ. ಗೀತಾಪ್ರೋಕ್ತ ಈಶ್ವರನ ದರ್ಶನವು ಮತ್ತು ಅರ್ಚನೆಯು ಸ್ವಭಾವನಿಯತವಾದ ಸ್ವಕರ್ಮಗಳಿಂದ ಶರೀರಯಾತ್ರೆಯನ್ನು ಮಾಡದವರಿಗೆ ಸಿದ್ಧಿಸುವದಿಲ್ಲ. ಗೀತಾಪ್ರೋಕ್ತನಾದ ಈಶ್ವರನ ದರ್ಶನವನ್ನೂ ಅರ್ಚನೆಯನ್ನೂ ವಿಧಿಪೂರ್ವಕವಾಗಿ ಮಾಡಲು ಬೇಕಾಗಿರುವ ಸಾಮರ್ಥ್ಯಗಳು ಎಲ್ಲಾ ಮಾನವರಿಗೂ ಏಕಸಮನಾಗಿರುವದಿಲ್ಲ. ಆ ಸಾಮರ್ಥ್ಯಗಳು ಯಾವವೆಂದರೆ:—(i) ಜಗತ್ರಯಗಳಲ್ಲಿನ ಭೋಗೈಶ್ವರ್ಯಗಳು ಅಸುಖ ರೂಪದ ದುಃಖ ಯೋನಯಗಳಾಗಿರುವ ರಹಸ್ಯವನ್ನು ಅರಿತು ಅವುಗಳನ್ನು ಪರಿತ್ಯಾಗಮಾಡುವ ಅಭ್ಯಾಸ ಸಾಮರ್ಥ್ಯ, (ii) ಯುಕ್ತವಾದ ಮಿತವಾದ ನಿಯತ ಆಹಾರ ವಿಹಾರಗಳಿಂದ ಶರೀರಯಾತ್ರೆಯನ್ನು ಮಾಡುವ ಸಾಮರ್ಥ್ಯ, (iii) ಕಾಮ ಕ್ರೋಧ ಲೋಭಗಳ ಉದ್ಭವ ವೇಗವನ್ನು ತಡೆಗಟ್ಟಿ ಕಾರ್ಯಕಾರಿಯಾಗದಂತೆ ಮಾಡುವ ಅಭ್ಯಾಸ ಸಾಮರ್ಥ್ಯ, (iv) ಹೃದ್ದೇಶಸ್ಥನಾದ ಜೀವನು ಜೀರ್ಣವಾದ ದೇಹಗಳನ್ನು ತ್ಯಜಿಸಿ ಹೊಸ ದೇಹಗಳನ್ನು ಸ್ವೀಕರಿಸುತ್ತಾ ಅನುಸ್ಯೂತನಾಗಿ ಅವಿನಾಶಿಯಾಗಿರುವದನ್ನು ದರ್ಶಿಸುವ ಸಾಮರ್ಥ್ಯ, (v) ಸರ್ವ ಜೀವರ ಹೃದ್ದೇಶಸ್ಥನಾದ ಗೀತಾಪ್ರೋಕ್ತನಾದ ಈಶ್ವರನನ್ನು ದರ್ಶಿಸಿ "ಪರಿಚರ್ಯಾತ್ಮಕ ನಿಷ್ಠೆ"ಯಿಂದ ಅರ್ಚಿಸುವ ಅಭ್ಯಾಸ ಸಾಮರ್ಥ್ಯ, (vi) ತನ್ನ ಹೃದ್ದೇಶಸ್ಥನಾದ ನಾನು ನಾನು ಎಂದು ಪ್ರಕಾಶಿಸುತ್ತಿರುವ ಜೀವನೇ ಜಗದ್ರೂಪನಾದ ಈಶ್ವರನು ಎಂಬ ರಹಸ್ಯವನ್ನು ಅರಿತು, "ಪತ್ರ ಪುಷ್ಪ ಫಲ ತೋಯ"ಗಳಿಂದಲೂ ಸ್ವಭಾವ ನಿಯತವಾದ ಸ್ವಕರ್ಮಗಳಿಂದಲೂ ಅರ್ಚಿಸುವ ಅಭ್ಯಾಸ ಸಾಮರ್ಥ್ಯ, (vii) ದುಃಖ ಭಯವರ್ಜಿತವಾದ ಶಾಶ್ವತವಾದ ಅಖಂಡ ಆನಂದವು ತನ್ನ ಹೃದ್ದೇಶಸ್ಥವಾಗಿರುವ ರಹಸ್ಯವನ್ನು ಅರಿತು, ಅತ್ಯಂತ ಸಮೀಪಸ್ಥನೂ ತನ್ನ ಹೃದ್ದೇಶಸ್ಥನೂ ಆದ ಈಶ್ವರನ ಸಹಾಯದಿಂದ ಮಾನವನ ನಿತ್ಯವೈರಿಯಾದ ಈಶ್ವರ ಮಾಯೆ

ಯನ್ನು ನಿಗ್ರಹಿಸಿ ಹೃದ್ದೇಶಸ್ಥವಾದ ಅಖಂಡ ಆನಂದವನ್ನು ಪಡೆಯಲು ಬೇಕಾದ ಅಭ್ಯಾಸ ಸಾಮರ್ಥ್ಯ.

ಮಾನವರು ದೀರ್ಘಕಾಲ ಅಭ್ಯಾಸಮಾಡದೆ ಗುರು ಪರಂಪರ ಪ್ರಾಪ್ತವಾದ ಉಪದೇಶವನ್ನು ಸಾಕ್ಷಾತ್ಪರಬ್ರಹ್ಮ ಸ್ವರೂಪದ ಗುರುಗಳಿಂದ ಪಡೆಯದೆ ಈ ಸಾಮರ್ಥ್ಯಗಳನ್ನು ಹೊಂದುವಂತಿಲ್ಲ. ಈ ಸಾಮರ್ಥ್ಯಗಳು ಮಾನವರಲ್ಲಿ ಏಕಸಮನಾಗಿರದೆ ಇರುವದಕ್ಕೆ ಅವರ ಪೂರ್ವ ದೇಹದ ಅಭ್ಯಾಸ ಸಾಮರ್ಥ್ಯಗಳ ಸಂಸ್ಕಾರಗಳು ಏಕಸಮನಾಗಿಲ್ಲದಿರುವದೇ ಕಾರಣ ವಾಗಿರುತ್ತದೆ. ಪೂರ್ವ ದೇಹದಲ್ಲಿ ಈ ಸಾಮರ್ಥ್ಯಗಳನ್ನು ಪಡೆಯಲು ಅಭ್ಯಾಸಮಾಡದಿದ್ದವರಿಗೆ ಈ ರೀತಿಯ ಅಭ್ಯಾಸ ಸಾಮರ್ಥ್ಯಗಳ ಸಂಸ್ಕಾರವು ಶೂನ್ಯವಾಗಿರುತ್ತದೆ. ಪೂರ್ವ ದೇಹದ ಅಭ್ಯಾಸ ಸಂಸ್ಕಾರ ಗಳನ್ನು ಪಡೆದ ಮಾನವರ ಇಹಜನ್ಮದ ದೇಹಗಳು ಭಗವಂತನಿಂದ ಭಾರತ ಪುರುಷನ ಪಾದ ತೊಡೆ ಬಾಹು ಮುಖಗಳ ವಿಭಾಗದಂತೆ ಶೂದ್ರ, ವೈಶ್ಯ, ಕ್ಷತ್ರಿಯ, ಬ್ರಾಹ್ಮಣರೆಂಬ ಚತುರ್ವರ್ಣ ವಿಭಾಗಗಳಿಂದ ಸೃಷ್ಟಿತವಾಗಿರು ತ್ತವೆ. ಹೃದ್ದೇಶಸ್ಥನಾದ ಈಶ್ವರನ ದರ್ಶನ ಅಭ್ಯಾಸ ಸಂಸ್ಕಾರಗಳು ಶೂನ್ಯವಾಗಿ ಗುಣ ಕರ್ಮ ವಿಭಾಗ ವಿಮರ್ಶೆಗಳಿಲ್ಲದ ಚತುರ್ವರ್ಣಗಳಿಗೆ ಸೇರದ ಮಾನವರೇ ನಿರ್ಲಿಪ್ತನಾದ ಈಶ್ವರನಿಂದ ಸೃಷ್ಟಿತವಾಗಿರುವ ವರ್ಣ ವಿಭಾಗ ಶೂನ್ಯರಾದ ಮಾನವರು ಆಗಿರುತ್ತಾರೆ.

ಗೀತ—**ಚಾತುರ್ವರ್ಣ್ಯಂ [ಮಯಾಸೃಷ್ಟಂ ಗುಣಕರ್ಮವಿಭಾಗಶಃ]**

ತಸ್ಯಕರ್ತಾರಮಪಿ [ಮಾಂ ವಿದ್ಧಿ ಅಕರ್ತಾರಮವ್ಯಯಮ್]

[ಪೂರ್ವದೇಶದ ಅಭ್ಯಾಸ ಸಂಸ್ಕಾರಗಳನ್ನು ಅನುಸರಿಸಿದ ಸೃಷ್ಟಿ]

ಇಹಜನ್ಮದ ಅಭ್ಯಾಸ ಸಂಸ್ಕಾರಗಳನ್ನು ಅನುಸರಿಸಿ ಮುಂದಿನ ಜನ್ಮದ ವರ್ಣವು ಸೃಷ್ಟಿತವಾಗುತ್ತದೆ. ಆದುದರಿಂದ ಮಾನವರು ದೈವೀಸಂಪತ್ತಿನ ಸಂಸ್ಕಾರಗಳನ್ನು ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಿ ಹೊಂದಬೇಕು.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಹೃದ್ದೇಶಸ್ಥವಾದ ಅಖಂಡ ಆನಂದವನ್ನು ಪಡೆಯಲು ಬೇಕಾದ ಅಭ್ಯಾಸ ಸಾಮರ್ಥ್ಯಗಳು ಯಾವುವು?

೨. ಇಹಜನ್ಮದ ಚತುರ್ವರ್ಣ ಮಾನವರ ಸೃಷ್ಟಿಯು ಯಾವ ನಿಯಮ ವನ್ನು ಅನುಸರಿಸಿರುತ್ತದೆ? ಭಾರತ ಪುರುಷನ ಅಂಗಗಳು ಯಾವುವು?

೮. ಭಾರತೀಯರ ಅನಾದಿಕಾಲದ ಜೀವನಚರಿತ್ರೆ

Traditional History of Life in Bharat

ಪುರುಷಸೂಕ್ತ—ಮುಖಂ ಕಿಮಸ್ಯ ಕೌ ಬಾಹೂ ಕಾವೂರೂ ಪಾದಾವುಚ್ಯೇತೇ ।
ಬ್ರಾಹ್ಮಣೋಽಸ್ಯ ಮುಖಮಾಸೀತ್ ಬಾಹೂರಾಜನ್ಯಃಕೃತಃ ।
ಊರೂತದಸ್ಯ ಯದ್ವೈಶ್ಯಃ ಪದ್ಭ್ಯಾಗುಂ ಶೂದ್ರೋ ಅಜಾಯತ॥

ಭಾರತದಲ್ಲಿನ ಚತುರ್ವರ್ಣದ ಪುರುಷರೂ ಸ್ತ್ರೀಯರೂ ಅವಿಭಕ್ತವಾದ ಏಕನಾದ ವಿಶ್ವಪುರುಷನ ಪಾದ ತೊಡೆ ಬಾಹು ಮುಖಗಳಂತೆ ವಿಭಕ್ತವಾಗಿ ತೋರುವ ಯಥಾರ್ಥದಲ್ಲಿ ಅವಿಭಕ್ತವಾದ ವಿಶ್ವಪುರುಷನ ಶರೀರವಾಗಿರುವ ರಹಸ್ಯವನ್ನು ಅರಿತು, ಪಾದ ತೊಡೆ ಬಾಹು ಮುಖಗಳು ತಮ್ಮ ತಮ್ಮ ಸ್ವಭಾವ ನಿಯತ ಕರ್ಮಗಳಲ್ಲಿ ನಿರತವಾಗುತ್ತಿರುವಂತೆ ತಮ್ಮ ತಮ್ಮ ಸ್ವಭಾವ ನಿಯತ ಕರ್ಮಗಳಲ್ಲಿ ನಿರತರಾಗುತ್ತಿದ್ದರು. ತಲೆ ಬಾಹು ತೊಡೆ ಪಾದಗಳ ಸ್ವಭಾವ ನಿಯತ ಕರ್ಮಗಳನ್ನು ಅಸಮ ವಿಭಕ್ತಿಗಳಾದ ಕರ್ಮಗಳೆಂದು ಅಸಹನೆಯಿಂದ ಯಾವ ಅಂಗವು ತ್ಯಜಿಸಿದರೂ ಪ್ರಸಿದ್ಧವಾದ ಶರೀರ ಯಾತ್ರೆಯು ಜರಗುವುದೇ ಅಶಕ್ಯವಾಗಿರುತ್ತದೆ. ಸ್ವಭಾವ ನಿಯತ ಕರ್ಮಗಳು ಶರೀರದ ಪ್ರತಿ ಒಂದು ಅಂಗಕ್ಕೂ ಸಮನಾಗಿ ಏಕ ರೂಪದಿಂದ ಇಲ್ಲದಿದ್ದರೂ ಅವುಗಳ ಅಸಮಾನವಾದ ಅನೇಕ ರೂಪದ ಸ್ವಭಾವ ನಿಯತ ವರ್ತನೆಯು ಶರೀರ ಯಾತ್ರೆಯನ್ನು ನಿರ್ವಹಿಸಲು ಅತ್ಯವಶ್ಯಕವಾಗಿರುತ್ತದೆ. ಶರೀರ ಯಾತ್ರೆಗೆ ಶರೀರದ ಎಲ್ಲಾ ಅಂಗಗಳೂ ಮುಖ್ಯವಾಗಿರುವ ರಹಸ್ಯವನ್ನು ಅರಿತು ಇರುವ ಭಾರತದಲ್ಲಿನ ಚತುರ್ವರ್ಣದ ಪುರುಷರೂ, ಸ್ತ್ರೀಯರೂ, ತಮ್ಮ ತಮ್ಮ ಸ್ವಭಾವ ನಿಯತ ಕರ್ಮಗಳಲ್ಲಿ ನಿರತರಾಗಿ ಆತ್ಮ ಹಿತದೃಷ್ಟಿಯಿಂದಲೂ ಸಮಾಜ ಹಿತದೃಷ್ಟಿಯಿಂದಲೂ ದೇಶ ಹಿತದೃಷ್ಟಿಯಿಂದಲೂ ಶರೀರಯಾತ್ರೆ ಮಾಡುವದನ್ನು ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಬೇಕು.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ವರ್ಣವಿಭಾಗ ಶೂನ್ಯರಾದ ಪುರುಷರ ಮತ್ತು ಸ್ತ್ರೀಯರ ಶರೀರಯಾತ್ರಾ ಕರ್ಮಗಳು ಸ್ವಭಾವ ನಿಯತವಾದ ಚತುರ್ವರ್ಣ ವಿಭಾಗದಿಂದ ಕೂಡಿರುವದಿಲ್ಲ. ದೇಶದಲ್ಲಿನ ಎಲ್ಲಾ

ಪುರುಷರೂ ಸ್ತ್ರೀಯರೂ ಭಗವಂತನಿಂದ ಸೃಷ್ಟಿತವಾಗಿರುವ ಸಮ ವಿಭಕ್ತರಾದ ಜೀವರೆಂದು ಮೋಹಿಸಿ ತಮ್ಮ ಸ್ವಭಾವ ನಿಯತವಾದ ಸಂಸ್ಕಾರಗಳನ್ನೂ ವಿಭಾಗಗಳನ್ನೂ ಲಕ್ಷಿಸದೆ ನಿರ್ದಿಷ್ಟವಾದ ನಿಯಮವಿಲ್ಲದೆ ಸ್ತ್ರೀಯರೂ ಪುರುಷರೂ ಸಮಾನರಂತೆ ಜಗತ್ತಿನ ವ್ಯವಹಾರಗಳಲ್ಲಿ ನಿರತರಾಗಿರುತ್ತಾರೆ.

ಈ ಪ್ರಶ್ನೆಗೆ ಉತ್ತರ ಹೇಳಿ

೧. ಶೂದ್ರ ವೈಶ್ಯ ಕ್ಷತ್ರಿಯ ಬ್ರಾಹ್ಮಣರ ಸ್ವಭಾವ ನಿಯತ ಕರ್ಮಗಳಿಗೂ ಪಾದ ತೊಡೆ ಬಾಹು ಮುಖಗಳ ಸ್ವಭಾವ ನಿಯತ ಕರ್ಮಗಳಿಗೂ ಇರುವ ಪ್ರಸಿದ್ಧವಾದ ಹೋಲಿಕೆ ಏನು?

೯. ಜ್ಞಾನ ಚಕ್ಷು — ಅಜ್ಞಾನ ಚಕ್ಷು

Sastraic Vision—Non-Sastraic Vision

ಶೃತಿ–ದೇಹೋ ದೇವಾಲಯಃಪ್ರೋಕ್ತೋ [ಜೀವೋದೇವ] ಸ್ಸನಾತನಃ[ಈಶ್ವರ]
ಗೀತ—**[ಈಶ್ವರಃ] ಸರ್ವಭೂತಾನಾಂ [ಹೃದ್ದೇಶೇ]ರ್ಜುನ ತಿಷ್ಠತಿ ॥**
[ಮಹಾಕಾಶವತ್ ತಿಷ್ಠತಿ]

ಮಾನವನು ತನ್ನ ಹೃದ್ದೇಶಸ್ಥನಾದ ಜೀವನೇ ಹೃದ್ದೇಶಸ್ಥನಾದ ಈಶ್ವರನಾಗಿರುವ ರಹಸ್ಯವನ್ನು ಅರಿತು ದರ್ಶಿಸುವ ದರ್ಶನಕ್ಕೆ "ಜ್ಞಾನ ಚಕ್ಷುವಿನ ದರ್ಶನ"ವೆಂದು ಹೆಸರು. ಮಾನವನ ಹೃದ್ದೇಶಸ್ಥನಾದ ಜೀವನೇ ಘಟಾಕಾಶ ಮಹಾಕಾಶವತ್ ಇರುವ ಹೃದ್ದೇಶಸ್ಥನಾದ ಈಶ್ವರನೆಂಬುದನ್ನೂ, ಆತನೇ ಮಹಾಕಾಶವತ್ ಇರುವ ಅವಿಭಕ್ತನಾದ ಏಕನಾದ ಭಾರತ ಪುರುಷನೆಂಬುದನ್ನೂ (Bharat citizen), ಆತನೇ ಮಹಾಕಾಶ ಇರುವ ಅವಿಭಕ್ತನಾದ ವಿಶ್ವದೇಹದ ಪುರುಷನೆಂಬುದನ್ನೂ (World citizen), ಆತನೇ ಜಗದ್ರೂಪನೂ ಜಗತ್ ಲೇಪನವಿಲ್ಲದ ನಿರ್ಲಿಪ್ತನಾದ ಪರಬ್ರಹ್ಮನೆಂಬುದನ್ನೂ ಅರಿತು, ಚತುರ್ವರ್ಣದ ಮಾನವರು ಆದರ್ಶನಗಳನ್ನು ಪಡೆಯಲು ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಬೇಕು. ಭಾರತದಲ್ಲಿನ ಮನುಷ್ಯದೇಹದ ಶ್ರೀ ಕೃಷ್ಣ ಶ್ರೀ ರಾಮ ವಸಿಷ್ಠ ವಿಶ್ವಾಮಿತ್ರ ಉದ್ದಾಲಕ ಶ್ವೇತಕೇತು ವಿವಸ್ವ ಮನು ಇಕ್ಷ್ವಾಕು ಇತ್ಯಾದಿ ಜ್ಞಾನಚಕ್ಷುಷರೇ ಧೀಮಂತರಾದ ಭಾರತೀಯರೆಂದೂ (Bharat

citizens), ವಿಶ್ವದೇಹದ ಮಾನವರೆಂದೂ (World citizens) ಶೃತಿಪ್ರಸಿದ್ಧರಾಗಿರುತ್ತಾರೆ. World citizen means Eswara in man's body.

ಭೋಗೈಶ್ವರ್ಯಪ್ರಸಕ್ತರಾದ ಪಾಶ್ಚಿಮಾತ್ಯರೂ ಭಾರತೀಯರೂ ತಮ್ಮ ಹೃದ್ದೇಶಸ್ಥನಾದ ಮಹಾಕಾಶವತ್ ಇರುವ ಈಶ್ವರನನ್ನೇ ಹೃದ್ದೇಶಸ್ಥರಾದ ವಿಭಕ್ತರಾದ ಅನೇಕ ಜೀವರೆಂದು ದರ್ಶಿಸುತ್ತಾರೆ. ಈ ರೀತಿಯ ಅಯಥಾರ್ಥವಾದ ಅನೇಕತ್ವ ದರ್ಶನಕ್ಕೆ (one seen as many) "ಅಜ್ಞಾನ ಚಕ್ಷುವಿನ ದರ್ಶನ"ವೆಂದು ಹೆಸರು. ಅವಿಭಕ್ತವಾದ ಏಕತ್ವದರ್ಶನವಿಲ್ಲದ ಅಜ್ಞಾನಚಕ್ಷುಷರಿಗೆ ವಿಶ್ವದೇಹದ ಪುರುಷನ ದರ್ಶನವು (World citizen) ಲಭಿಸುವದು ದುರ್ಲಭವಾಗಿರುತ್ತದೆ.

ಈ ಪ್ರಶ್ನೆಗೆ ಉತ್ತರ ಹೇಳಿ

೧. ಜ್ಞಾನಚಕ್ಷುಷರಾದ ವಿಶ್ವದೇಹದ ಮಾನವರಾಗಲು (World citizen) ಚತುರ್ವರ್ಣದ ಮಾನವರು ಯಾವ ದರ್ಶನವನ್ನು ಅಭ್ಯಾಸಮಾಡಬೇಕು?

೧೦. ಹಿಂದೂ ಸಮಾಜದ ಚತುರ್ವರ್ಣಗಳ ಅಪಪ್ರಚಾರ

Misrepresented Hindu Casteism

ಇಂದಿನ ಭಾರತದಲ್ಲಿನ ಯುವಕರೂ ಯುವತಿಯರೂ ಹಿಂದೂಕುಲ, ಹಿಂದೂ ಜಾತಿಗಳ ಪೂರ್ವ ಸಂಪ್ರದಾಯಗಳನ್ನು ತೊರೆದು ಪಾಶ್ಚಿಮಾತ್ಯರಂತೆ ವರ್ತಿಸುತ್ತಿರುವದಕ್ಕೆ, ಅವರು ಶಾಲೆಗಳಲ್ಲಿ ಓದುವ ಹಿಂದೂ ಸಂಸ್ಕೃತಿ ಸಂಸ್ಕಾರಗಳ ಪರಿಚಯವಿಲ್ಲದ ಪಾಶ್ಚಿಮಾತ್ಯರಿಂದ ರಚಿತವಾದ, ಹಿಂದೂ ಸಮಾಜದ ಚತುರ್ವರ್ಣಗಳನ್ನು ಅಪಪ್ರಚಾರಮಾಡುವ ಚರಿತ್ರೆಗಳೇ ಕಾರಣವಾಗಿರುತ್ತವೆ.

Extract from the Concise History of the Indian People, by H. G. Rawlinson, C.I.E., M.A., F.R. HISTS, Indian Education Service (Retired), Formerly Principal, Deccan College, Poona.

"The caste is at the root of the Hindu Society and to destroy it would over throw the whole social structure.

The existence of a number of water-tight compartments prevent the growth of a truly national spirit. It leads to jealousy and friction. Democracy is impossible under these circumstances and the lower castes become degraded and lose their self-respect."

ವಿದ್ಯಾಮಂದಿರಗಳಲ್ಲಿನ ಈ ರೀತಿಯ ಅಪಪ್ರಚಾರಗಳನ್ನು ರದ್ದುಗೊಳಿಸಿ ಮಾನವನ ಆತ್ಮೋದ್ಧಾರಕ್ಕಾಗಿ ಏರ್ಪಟ್ಟಿರುವ ಪರಂಪರ ಪ್ರಾಪ್ತವಾಗಿ ಬಂದಿರುವ ಹಿಂದೂ ಸಂಪ್ರದಾಯಗಳು ಯುವಕ ಯುವತಿಯರ ಹೃದಯದಲ್ಲಿ ನೆಲಸುವಂತೆ ಮಾಡಬೇಕು. ಪಾಶ್ಚಿಮಾತ್ಯರ ನ್ಯಾಷನಲ್ ಸ್ಪಿರಿಟ್, ಡೆಮಾಕ್ರಸಿಗಳು ಕೇವಲ ಆರ್ಥಿಕವಾದದ್ದು ಐಹಿಕವಾದದ್ದು ಚಂಚಲವಾದದ್ದು. ಮಾನವರ ನೈತಿಕ ಜೀವನಕ್ಕೂ ಆತ್ಮೋದ್ಧಾರಕ್ಕೂ ಪ್ರಯೋಜನವಾದವುಗಳಲ್ಲ. ಭಾರತೀಯರಿಗೆ ಬೇಕಾದುದು ಇಹಕ್ಕೂ ಪರಕ್ಕೂ ಆತ್ಮೋದ್ಧಾರಕ್ಕೂ ಪ್ರಯೋಜನವಾಗುವ ರಾಮಾಯಣ ಕಾಲದಲ್ಲಿನ ರಾಮರಾಜ್ಯದಲ್ಲಿದ್ದಂಥಾ ಧರ್ಮನೀತಿಗಳ ಪ್ರಭುತ್ವ, ನೈತಿಕ ಗೃಹ ಜೀವನ ಮತ್ತು ನೈತಿಕ ಸಮಾಜ ಜೀವನಗಳ ಪರಿಸ್ಥಿತಿ ಎಂಬುವನ್ನು ಗ್ರಹಿಸಬೇಕು.

ಈ ಪ್ರಶ್ನೆಗೆ ಉತ್ತರ ಹೇಳಿ

೧. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಗೃಹಜೀವನ ಸಮಾಜ ಜೀವನಗಳ ಧ್ಯೇಯಕ್ಕೂ ರಾಮರಾಜ್ಯದಲ್ಲಿದ್ದ ಗೃಹ ಜೀವನ ಸಮಾಜ ಜೀವನಗಳ ಧ್ಯೇಯಕ್ಕೂ ಇರುವ ವ್ಯತ್ಯಾಸವೇನು?

೧೧. ಚತುರ್ವರ್ಣ ದೇಹಸ್ಥರ ಸ್ವಭಾವನಿಯತವಾದ ಶರೀರ ಯಾತ್ರೆ

Traditional Indian Sociologists and Economists

ದೇವಾಲಯಗಳ ನಿರ್ಮಲತೆಯನ್ನೂ ಗರ್ಭಗುಡಿಗಳ ಪವಿತ್ರತೆಯನ್ನೂ ರಕ್ಷಿಸುವಂತೆ, ಪೂರ್ವ ದೇಹಗಳ ಅಭ್ಯಾಸ ಸಂಸ್ಕಾರಗಳನ್ನು ಅನುಸರಿಸಿ ಇಹಜನ್ಮದ ದೇಹಗಳನ್ನು ಪಡೆದಿರುವ ಭಾರತ ಪುರುಷನಿಗೆ

ಪಾದ ತೊಡೆ ಬಾಹು ಮುಖದಂತೆ ಇರುವ ಶೂದ್ರ ವೈಶ್ಯ ಕ್ಷತ್ರಿಯ ಬ್ರಾಹ್ಮಣ ದೇಹಸ್ಥರು ತಮ್ಮ ದೇಹಗಳ ನಿರ್ಮಲತೆಯನ್ನು ಸ್ವಭಾವನಿಯತ ಕರ್ಮನಿಷ್ಠೆಯಿಂದ ಶರೀರ ಯಾತ್ರೆಯನ್ನು ಮಾಡುವದರಿಂದಲೂ, ತಮ್ಮ ಹುದ್ದೇಶದ ಪವಿತ್ರತೆಯನ್ನು ಹೃದ್ದೇಶಸ್ಥನಾದ ಈಶ್ವರನ ದರ್ಶನ ಅರ್ಚನ ಭಜನೆಗಳಿಂದಲೂ, ರಕ್ಷಿಸುವದನ್ನು ಪ್ರಯತ್ನ ಪೂರ್ವಕ ಅಭ್ಯಾಸಮಾಡ ಬೇಕು. ಸ್ವಭಾವ ನಿಯತವಾದ ಅವರ ಶರೀರ ಯಾತ್ರೆಯು ಯಾವರೀತಿ ಇರುತ್ತದೆ ಎಂದರೆ:—

ಶೂದ್ರ ದೇಹಸ್ಥರು.—ಶಾಸ್ತ್ರನಿಷಿದ್ಧ ಕರ್ಮಗಳನ್ನೂ ಶಾಸ್ತ್ರನಿಷಿದ್ಧ ಆಹಾರ ವ್ಯವಹಾರಗಳನ್ನೂ ತ್ಯಜಿಸಿ, ಶಾಸ್ತ್ರನಿಯತ ಆಹಾರ ವ್ಯವಹಾರ ಗಳಿಂದ ಶರೀರ ಧಾರಣೆಯನ್ನು ಮಾಡುತ್ತಾ ಸರ್ವ ಜೀವರ ಹುದ್ದೇಶಸ್ಥ ನಾದ ಗೀತಾಪ್ರೋಕ್ತನಾದ ಈಶ್ವರನನ್ನು ದರ್ಶಿಸಿ ಸ್ವಭಾವ ನಿಯತವಾದ ಪರಿಚರ್ಯಾತ್ಮಕ ನಿಷ್ಠೆಯಿಂದ ಶರೀರ ಯಾತ್ರೆಯನ್ನು ಮಾಡಲು ಸಮರ್ಥ ರಾದ ಕಾರ್ಮಿಕರು. "ಪರಿಚರ್ಯಾತ್ಮಕ ನಿಷ್ಠೆಯು" ಗೀತಾಪ್ರೋಕ್ತವಾದ ಒಂದು ಅರ್ಚನೆ; ಶಾಸ್ತ್ರನಿಯತವಾದ ಪ್ರಥಮ ಪಾಠ. ಪರಿಚರ್ಯಾತ್ಮಕ ನಿಷ್ಠೆಯನ್ನು ಹೇಯವಾದುದೆಂದು ಮೋಹದಿಂದ ಪರಿತ್ಯಾಗ ಮಾಡಬಾರದು. ಶೂದ್ರರು ಭಾರತ ಪುರುಷನ ಪಾದಗಳಂತೆ ಇರುವ ಮುಖ್ಯವಾದ ಅಂಗ.

ಭಾರತ ಪ್ರಸಿದ್ಧನಾದ ವಿದುರನು ಶೂದ್ರ ದೇಹಸ್ಥನು. ವಿದುರನ ನೀತಿಗಳೂ ವಿದುರನಿಂದ ದ್ವಾಪರಯುಗದಲ್ಲಿ ಪ್ರತಿಷ್ಠವಾದ ವಿದುರಾಶ್ವತ್ಥವು ಭರತಖಂಡದಲ್ಲಿ ಇಂದಿಗೂ ಪ್ರಖ್ಯಾತಿಯನ್ನು ಹೊಂದಿರುತ್ತದೆ. ಇಂದಿನ ಭಾರತದಲ್ಲಿನ ಶೂದ್ರರು ವಿದುರನಂತೆ ಶರೀರ ಯಾತ್ರೆ ಮಾಡುವದನ್ನು ಅಭ್ಯಾಸಮಾಡಬೇಕು.

ವೈಶ್ಯ ದೇಹಸ್ಥರು.—ಶಾಸ್ತ್ರನಿಷಿದ್ಧ ಕರ್ಮಗಳನ್ನೂ ಶಾಸ್ತ್ರನಿಷಿದ್ಧ ಆಹಾರ ವ್ಯವಹಾರಗಳನ್ನೂ ತ್ಯಜಿಸಿ, ಶಾಸ್ತ್ರನಿಯತ ಆಹಾರ ವ್ಯವಹಾರ ನಿಷ್ಠರಾಗಿ ಕೃಷಿ ಗೋರಕ್ಷಣೆ ವಾಣಿಜ್ಯ ಇತ್ಯಾದಿ ವೃತ್ತಿಗಳಿಂದ ಶರೀರ ಯಾತ್ರೆಯನ್ನು ಮಾಡುತ್ತ ಸಮಾಜ ಸೇವೆಯನ್ನು ಈಶ್ವರಭಾವದಿಂದ ಮಾಡಲು ಸಮರ್ಥರಾದವರು. ವೈಶ್ಯವೃತ್ತಿಯು ಸ್ವಾರ್ಥ ಪರಿತ್ಯಾಗದ ಅಭ್ಯಾಸ ಸಾಮರ್ಥ್ಯವನ್ನೂ ಭೋಗೈಶ್ವರ್ಯಗಳಲ್ಲಿನ ವೈರಾಗ್ಯನಿಷ್ಠಾ

ಸಾಮರ್ಥ್ಯವನ್ನೂ ವೃದ್ಧಿಮಾಡುವ ಆತ್ಮಿಕಾ ನಿಷ್ಠೆ. ಇದು ಮಾನವನಿಗೆ ಹೇಳಿರುವ ಶಾಸ್ತ್ರನಿಯತವಾದ ದ್ವಿತೀಯ ಪಾತದಂತಿರುವ ಈಶ್ವರ ಅರ್ಚನೆ. ವೈಶ್ಯರು ಬಾಲ್ಯದಲ್ಲಿಯೇ ಆತ್ಮಿಕಾನಿಷ್ಠೆಯಿಂದ ಶರೀರ ಯಾತ್ರೆಯನ್ನೂ ಸಮಾಜ ಸೇವೆಯನ್ನೂ ಮಾಡಲು ದೀಕ್ಷೆಯನ್ನು ಪಡೆಯುತ್ತಾರೆ. ಆದುದರಿಂದ ಇವರಿಗೆ ದ್ವಿಜರು ಎಂದು ಹೆಸರು ಬಂದಿದೆ. ವೈಶ್ಯರು ಭಾರತ ಪುರುಷನ ತೊಡೆಗಳಂತೆ ಇರುವ ಮುಖ್ಯವಾದ ಅಂಗ.

ವಾಣಿಜ್ಯ ವೃತ್ತಿಯನ್ನು ಅವಲಂಬಿಸಿದ್ದ ವೈಶ್ಯ ದೇಹಸ್ಥನಾದ ತುಲಾಧರನು ಸಮತೂಕದ ದೃಷ್ಟಿಯಿಂದ ಶರೀರ ಯಾತ್ರೆಯನ್ನೂ ಸಮಾಜ ಸೇವೆಯನ್ನೂ ಮಾಡುತ್ತಿದ್ದ ಪುರಾಣಪ್ರಸಿದ್ಧನಾದ ಧರ್ಮ ಮೂರ್ತಿ. ಇಂದಿನ ಭರತಖಂಡದ ವೈಶ್ಯರು ತುಲಾಧರನಂತೆ ಶರೀರ ಯಾತ್ರೆ ಮಾಡುವದನ್ನು ಪ್ರಯತ್ನಪೂರ್ವಕ ಅಭ್ಯಾಸಮಾಡಬೇಕು.

ಕ್ಷತ್ರಿಯ ದೇಹಸ್ಥರು.—ಬಾಹುಬಲ ಬುದ್ಧಿಬಲಗಳಿಂದ ಕೂಡಿ ಕ್ಷತ್ರಿಯ ಧರ್ಮನಿಷ್ಠರಾಗಿ ದುಷ್ಕೃತರಿಗೆ ಹೆದರದೆ "ಸ್ವಧರ್ಮೇ ನಿಧನಂ ಶ್ರೇಯಃ" ಎಂಬ ಧರ್ಮ ರಹಸ್ಯವನ್ನು ಅರಿತು ದಕ್ಷತೆಯಿಂದ ದುಷ್ಕೃತರನ್ನು ವಿನಾಶಮಾಡಿ ಲೋಕಸಂಗ್ರಹ ದೃಷ್ಟಿಯಿಂದ ದೇಶದಲ್ಲಿನ ಇತರ ಜನರಿಗೆ ಆದರ್ಶರಾಗಿ ತಮ್ಮ ಸರ್ವಸ್ವವನ್ನೂ ಚತುರ್ವರ್ಣ ಧರ್ಮ ನಿಷ್ಠರಾದ ಸಾಧುಗಳಿಗೆ ಈಶ್ವರನಂತೆ ದಾನಮಾಡುತ್ತಾ ಶರೀರ ಯಾತ್ರೆಯನ್ನು ಮಾಡಲು ಸಮರ್ಥರಾದವರು. ಇದೇ ಕ್ಷತ್ರಿಯ ದೇಹಸ್ಥರಿಗೆ ಹೇಳಿರುವ ಶಾಸ್ತ್ರನಿಯತವಾದ ತೃತೀಯ ಪಾತದಂತಿರುವ ಈಶ್ವರ ಅರ್ಚನೆ. ಕ್ಷತ್ರಿಯರು ಲೋಕಸಂಗ್ರಹಕ್ಕಾಗಿ ದುಷ್ಕೃತರ ವಿನಾಶವನ್ನು ಮಾಡುವದೇ ಈಶ್ವರ ಅರ್ಚನೆ ಎಂದು ಬಾಲ್ಯದಲ್ಲಿಯೇ ದುಷ್ಕೃತರ ವಿನಾಶ ಕಾರ್ಯದಿಂದ ದೇಶಸೇವೆಯನ್ನುಮಾಡಲು ದೀಕ್ಷೆಯನ್ನು ಪಡೆಯುತ್ತಾರಾದುದರಿಂದ ಕ್ಷತ್ರಿಯರಿಗೂ ದ್ವಿಜರು ಎಂದು ಹೆಸರು ಬಂದಿದೆ. ಕ್ಷತ್ರಿಯರು ಭಾರತ ಪುರುಷನ ಬಾಹುಗಳಂತೆ ಇರುವ ಮುಖ್ಯವಾದ ಅಂಗ.

ವಿವಸ್ವ–ಮನು–ಇಕ್ಷ್ವಾಕು ದಿಲೀಪ ರಘು ಜನಕ ಇವರುಗಳು ಶೃತಿಪ್ರಸಿದ್ಧರಾದ ಕ್ಷತ್ರಿಯರು. ಇಂದಿನ ಕ್ಷತ್ರಿಯರು ದಿಲೀಪ ರಘು

ಜನಕಾದಿಗಳಂತೆ ಶರೀರ ಯಾತ್ರೆ ಮಾಡುವದನ್ನು ಅಭ್ಯಾಸಮಾಡಬೇಕು. ಕ್ಷತ್ರಿಯ ರಾಜನಾದ ವಿಶ್ವಾಮಿತ್ರನು ಗಾಯತ್ರಿ ಅರ್ಚನೆಯಿಂದ ಬ್ರಹ್ಮರ್ಷಿ ಆಗಿ ವಸಿಷ್ಠನಿಗೆ ಸಮಾನನಾದುದು ಗಮನಾರ್ಹವಾದುದು.

ಬ್ರಾಹ್ಮಣ ದೇಹಸ್ಥರು.—ಬುದ್ಧಿ ಮನ ಇಂದ್ರಿಯಗಳನ್ನು ಭೋಗೈಶ್ವರ್ಯಗಳ ವಶವಾಗದಂತೆ ನಿಗ್ರಹಮಾಡಿ ಲೋಕಸಂಗ್ರಹಾರ್ಥವಾಗಿಯೂ ಧರ್ಮನೀತಿಗಳ ಸ್ಥಾಪನೆಗಾಗಿಯೂ ಶರೀರ ಯಾತ್ರೆಯನ್ನು ಮಾಡುತ್ತಾ ಹೃದ್ದೇಶಸ್ಥವಾದ ಅಖಂಡ ಆನಂದ ಪ್ರಾಪ್ತಿಗಾಗಿ ಗುರುಪರಂಪರ ಪ್ರಾಪ್ತವಾದ ಜ್ಞಾನ ವಿಜ್ಞಾನ ನಿಷ್ಠೆಗಳಲ್ಲಿ ನಿರತರಾಗಲು ಸಮರ್ಥರಾದವರು. ಬ್ರಾಹ್ಮಣರು ಬಾಲ್ಯದಲ್ಲಿಯೇ ವೈರಾಗ್ಯ ನಿಷ್ಠೆಯಿಂದ ಜ್ಞಾನ ವಿಜ್ಞಾನ ನಿಷ್ಠೆಗಳಲ್ಲಿ ನಿರತರಾಗಲು ದೀಕ್ಷೆಯನ್ನು ಪಡೆಯುತ್ತಾರಾದುದರಿಂದ ಇವರಿಗೆ ದ್ವಿಜೋತ್ತಮರೆಂದು ಹೆಸರು ಬಂದಿದೆ. ಬ್ರಾಹ್ಮಣರು ಭಾರತ ಪುರುಷನ ಮುಖದಂತೆ ಇರುವ ಮುಖ್ಯವಾದ ಉತ್ತಮಾಂಗ.

ಯಾಜ್ಞವಲ್ಕ ವಸಿಷ್ಠ ಉದ್ದಾಲಕ ಶ್ವೇತಕೇತು ಇವರುಗಳು ಶೃತಿ ಪ್ರಸಿದ್ಧರಾದ ದ್ವಿಜೋತ್ತಮರು. ಶ್ರೀಮಂತರಲ್ಲದ ಧೀಮಂತರಾದ ಜಗದ್ಗುರುಗಳು. ಇಂದಿನ ಬ್ರಾಹ್ಮಣರು ಯಾಜ್ಞವಲ್ಕ ವಸಿಷ್ಠರಂತೆ ಶರೀರ ಯಾತ್ರೆಯನ್ನು ಮಾಡಲು ಅಭ್ಯಾಸಮಾಡಬೇಕು.

ಮಾನವನ ಹೃದಯದಲ್ಲಿನ ರಾಗ ಭಯ ಕ್ರೋಧಗಳನ್ನು ನಿರ್ಮೂಲ ಮಾಡುವದಕ್ಕಾಗಿಯೂ ಮಾನವನ ಆತ್ಮೋದ್ಧಾರಕ್ಕಾಗಿಯೂ ನಿಯತವಾಗಿ ಪರಂಪರ ಪ್ರಾಪ್ತವಾಗಿರುವ ಚತುರ್ವರ್ಣದ ಶರೀರ ಯಾತ್ರಾ ಪದ್ಧತಿಗಳನ್ನು ಪಾಶ್ಚಿಮಾತ್ಯರಂತೆ ಅಪಪ್ರಚಾರಮಾಡುತ್ತಾ ತ್ಯಜಿಸುತ್ತಿರುವುದು, ಇಂದಿನ ಭಾರತೀಯರ ಅಲ್ಪಬುದ್ಧಿಯ ವಿಪರೀತ ದರ್ಶನವನ್ನು ನಿದರ್ಶಿಸುವದೇ ಹೊರತು ಭಾರತ ಸಂಸ್ಕೃತಿಗೆ ಇರುವ ಅನಾದಿಕಾಲದ ಉನ್ನತಮಟ್ಟವನ್ನು ಪ್ರದರ್ಶಿಸಿದಂತೆ ಆಗುವದಿಲ್ಲ.

ಈ ಪ್ರಶ್ನೆಗೆ ಉತ್ತರ ಹೇಳಿ

೧. ಬ್ರಾಹ್ಮಣರಿಗೆ ದ್ವಿಜೋತ್ತಮರು ಎಂದು ಹೆಸರು ಬರಲು ಕಾರಣವೇನು? ಪರಿಚರ್ಯಾತ್ಮಕನಿಷ್ಠೆ ಎಂದರೇನು?

೧೨. ಶ್ರೀರಾಮನ ಏಕಚಕ್ರಾಧಿಪತ್ಯ
Traditional Citizenship and God's Rule

ಶ್ರೀರಾಮನ ಕಾಲದಲ್ಲಿನ ಚತುರ್ವರ್ಣದ ಪ್ರಜೆಗಳು ಧರ್ಮ ಅವಿರುದ್ಧವಾದ ಸ್ವಭಾವನಿಯತವಾದ ಗೃಹಜೀವನ ಸಮಾಜ ಜೀವನ ರಾಷ್ಟ್ರ ಜೀವನಗಳ ಅವಿಭಕ್ತವಾದ ಏಕರೂಪದ ಹಿತದೃಷ್ಟಿಯಿಂದ ಏಕ ಚಕ್ರದಂತೆ (engaged in gear) ಪ್ರವರ್ತಿಸುತ್ತಿದ್ದುದರಿಂದ ರಾಮ ರಾಜ್ಯಕ್ಕೆ ಏಕಚಕ್ರಾಧಿಪತ್ಯವೆಂದೂ ಶ್ರೀರಾಮನಿಗೆ ಏಕಚಕ್ರಾಧಿಪತಿ ಎಂದೂ ಹೆಸರುಗಳಿದ್ದವು. ಶ್ರೀರಾಮನು ಮನುಷ್ಯದೇಹದ ಪರಬ್ರಹ್ಮ ನಾಗಿ ದೇಶದಲ್ಲಿನ ಪ್ರಜೆಗಳ ಶರೀರಯಾತ್ರೆಗೆ ಆದರ್ಶನಾದ ರಾಜನಾಗಿದ್ದುದ ರಿಂದ ರಾಮರಾಜ್ಯದಲ್ಲಿನ ಚತುರ್ವರ್ಣ ಪ್ರಜೆಗಳ ಜೀವನದ ನೈತಿಕ ಮಟ್ಟವು ರಾಮ ಬ್ರಹ್ಮನ ಜೀವನದ ನೈತಿಕ ಮಟ್ಟದಂತೆಯೇ (Jiva engaged in gear with Brahman) ಉನ್ನತ ಸ್ಥಿತಿಯಲ್ಲಿದ್ದವು. ರಾಮ ಬ್ರಹ್ಮನ ರಾಜ್ಯವನ್ನು ರಾಜನ ಪ್ರಭುತ್ವವೆಂದಾಗಲೀ (Kings rule) ಪ್ರಜೆಗಳ ಪ್ರಭುತ್ವವೆಂದಾಗಲೀ (Peoples rule) ಗ್ರಹಿಸಬಾರದು. ಪ್ರಜೆ ಗಳಿಗೂ ರಾಜನಿಗೂ ಇದ್ದ ಪರಸ್ಪರ ದರ್ಶನವನ್ನು ಅವಿಭಕ್ತವಾದ ಜೀವ ಬ್ರಹ್ಮದರ್ಶನದ ಧರ್ಮನೀತಿಗಳ ಪ್ರಭುತ್ವವೆಂದು (God's rule) ಗ್ರಹಿಸಬೇಕು. ಶ್ರೀರಾಮನ ಆಧಿಪತ್ಯದಲ್ಲಿ ಚತುರ್ವರ್ಣ ಧರ್ಮಗಳನ್ನೂ ನೀತಿಗಳನ್ನೂ (God's laws) ಉಲ್ಲಂಘಿಸಿದ ಗೃಹಸ್ಥರೂ ಗೃಹಿಣಿಯರೂ ದೇಶದಲ್ಲಿನ ಇತರ ಜನರಿಗೆ ಬುದ್ಧಿ ಭೇದವಾಗದಂತೆ ಗೃಹಗಳಿಂದಲೂ ಸಮಾಜದಿಂದಲೂ ಬಹಿಷ್ಕರಿಸಲ್ಪಟ್ಟು ಅಸ್ಪೃಶ್ಯರಂತೆ ತೀವ್ರವಾದ ನೈತಿಕ ಶಿಕ್ಷೆಗೆ ಗುರಿಯಾಗುತ್ತಿದ್ದರು. ಬಹಿಷ್ಕೃತರಾದವರು ಅಧರ್ಮ ಅನೀತಿ ವರ್ತನೆಗಳನ್ನು ತ್ಯಜಿಸಿ ಪ್ರಾಯಶ್ಚಿತ್ತ ಕರ್ಮಗಳಿಂದ ಪುನೀತರಾಗಿ ಬಹಿಷ್ಕಾರ ಅಸ್ಪೃಶ್ಯತೆಗಳನ್ನು ನಿವಾರಣೆ ಮಾಡಿಕೊಳ್ಳುತಿದ್ದರು. ಗೃಹ ಜೀವನದ ಮತ್ತು ಸಮಾಜಜೀವನದ ನೈತಿಕ ಮಟ್ಟದ ಉನ್ನತಿಯು ಬಹಿಷ್ಕಾರ ಅಸ್ಪೃಶ್ಯತಾ ರೂಪದ ನೈತಿಕ ಶಿಕ್ಷೆಗಳಿಂದ ರಕ್ಷಿಸಲ್ಪಡುತ್ತಿದ್ದವು.

ಪಾಶ್ಚಿಮಾತ್ಯರಾಷ್ಟ್ರಗಳಲ್ಲಿ ಈ ಪದ್ಧತಿಗಳು ಇರುವದಿಲ್ಲ. ಇವರು ರಾಜನ ಪ್ರಭುತ್ವಕ್ಕಿಂತ ಪ್ರಜಾ ಪ್ರಭುತ್ವವೇ ಶ್ರೇಷ್ಠತರವೆಂದು ಅರಿತು

ಇರುತ್ತಾರೆ. ಇವರು ಜೀವ ಬ್ರಹ್ಮರೂಪದ ಧರ್ಮನೀತಿಗಳ ಪ್ರಭುತ್ವವು (God's rule) ಅಚಲವಾದ ಶ್ರೇಷ್ಠತಮವೆಂಬ ರಹಸ್ಯವನ್ನು ಅರಿತು ಇರುವುದಿಲ್ಲ. ಪ್ರಜಾಪ್ರಭುತ್ವದ ನೀತಿಗಳು ಪ್ರಜೆಗಳ ಬಹುಮತವು ಚಲಿಸಿದಂತೆಲ್ಲಾ ಚಲಿಸುತ್ತಿರುತ್ತವೆ.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ರಾಮರಾಜ್ಯದಲ್ಲಿ ರಾಜನಿಗೂ ಪ್ರಜೆಗಳಿಗೂ ಇದ್ದ ಪರಸ್ಪರ ದರ್ಶನವೇನು?

೨. ಪ್ರಜಾಪ್ರಭುತ್ವದಲ್ಲಿ ರಾಷ್ಟ್ರಪತಿಗೂ ಪ್ರಜೆಗಳಿಗೂ ಇರುವ ಪರಸ್ಪರ ದರ್ಶನವೇನು?

೧೩. ನಿಷ್ಕಾಮಕರ್ಮ ಸಕಾಮಕರ್ಮಗಳು

Traditional Relegion and Ethics

ನಿಷ್ಕಾಮಕರ್ಮ ಸಕಾಮಕರ್ಮ ಅಸುರಕರ್ಮಗಳೆಂದು ತ್ರಿವಿಧವಾಗಿ ಕರ್ಮಗಳು ಲೋಕದಲ್ಲಿ ಪ್ರಸಿದ್ಧಿಯನ್ನು ಹೊಂದಿರುತ್ತವೆ. ಕಾಮ ಎಂದರೆ ಕ್ರೋಧ ಲೋಭ ಭಯ ಅಜ್ಞಾನಗಳನ್ನು ಉದ್ಭವಮಾಡಿ ಹೃದ್ದೇಶಸ್ಥನಾದ ಈಶ್ವರನ ದರ್ಶನಕ್ಕೂ ಹೃದ್ದೇಶಸ್ಥವಾದ ಆನಂದ ಪ್ರಾಪ್ತಿಗೂ ಪ್ರತಿಬಂಧಕವಾಗಿರುವ ದುರತ್ಯಯವಾದ ನಿತ್ಯವೈರಿ. ಮನುಷ್ಯನು ಮಾಡುವ ಸರ್ವ ಕರ್ಮಗಳೂ, ಕಾಮ ಕ್ರೋಧ ಲೋಭ ಭಯ ಅಜ್ಞಾನಗಳಿಂದ ಪ್ರೇರಿತವಾಗಿ ಧೂಮವು ಅಗ್ನಿಯನ್ನು ಆವರಿಸಿರುವಂತೆ, ಹೃದ್ದೇಶಸ್ಥನಾದ ಈಶ್ವರನನ್ನೂ ಅಖಂಡ ಆನಂದವನ್ನೂ ಆವೃತಮಾಡಿರುತ್ತವೆ.

ಗೀತ—**ಸ್ವಭಾವ ನಿಯತಂ ಕರ್ಮ ಕುರ್ವ [ನ್ನಾಪ್ನೋತಿಕಿಲ್ಬಿಷಮ್]** [ನಿಷ್ಕಾಮಕರ್ಮ]

ಶಾರೀರ ಕೇವಲಂ ಕರ್ಮ ಕುರ್ವ [ನ್ನಾಪ್ನೋತಿಕಿಲ್ಬಿಷಮ್] ,,

ಯೋಗಿನಃಕರ್ಮ ಕುರ್ವಂತಿ ಸಂಗಂತ್ಯಕ್ತ್ವಾತ್ಮಶುದ್ಧಯೇ ,,

ಯಜ್ಞದಾನಂತಪಶ್ಚೈವ [ಪಾವನಾನಿಮನೀಷಿಣಃ] [ನಿಷ್ಕಾಮಕರ್ಮ]

ನಿಷ್ಕಾಮ ಕರ್ಮ

ಗೀತಾಪ್ರೋಕ್ತವಾದ ಶೂದ್ರನ ಪರಿಚರ್ಯಾತ್ಮಕ ಕರ್ಮವು, ವೈಶ್ಯನ ಕೃಷಿ ಗೋರಕ್ಷಣೆ ವಾಣಿಜ್ಯ ಕರ್ಮಗಳು, ಕ್ಷತ್ರಿಯನ ದುಷ್ಟನಿಗ್ರಹ-

ದಾನ ಕರ್ಮಗಳೂ, ಬ್ರಾಹ್ಮಣನ ಲೋಕಸಂಗ್ರಹ ಕಾರ್ಯಗಳೂ, ಭಿಕ್ಷಾಟನೆ ಜ್ಞಾನ ವಿಜ್ಞಾನ ನಿಷ್ಠೆಗಳೂ ಅವರ ಸ್ವಭಾವನಿಯತವಾದ ಕೇವಲ ಶರೀರ ಯಾತ್ರೆಗೆ ಅವಶ್ಯಕವಾದ ನಿತ್ಯಕರ್ಮಗಳಾದುದರಿಂದ ಅವು ದೋಷಯುತವಾದ ಬುದ್ಧಿ ಮನಗಳಿಗೆ ಕಿಲ್ಬಿಷವನ್ನುಂಟುಮಾಡುವ ಸಕಾಮಕರ್ಮಗಳೂ ಅಸುರ ಕರ್ಮಗಳೂ ಅಲ್ಲ. ಆ ಕರ್ಮಗಳು ಹೃದಯ ನೈರ್ಮಲ್ಯವನ್ನು ವೃದ್ಧಿ ಮಾಡುವ ಹೃದ್ದೇಶಸ್ಥನಾದ ಈಶ್ವರನ ಅರ್ಚನೆಗಾಗಿ ವಿಧಿಸಲ್ಪಟ್ಟಿರುವ ಗುಹ್ಯಾದ್ಗುಹ್ಯತರವಾದ ಗೀತಾಪ್ರೋಕ್ತವಾದ ಅರ್ಚನಾ ಸಾಮಗ್ರಿಗಳು. ಈ ಕರ್ಮಗಳಿಗೆ "ನಿಷ್ಕಾಮ ಕರ್ಮ"ಗಳೆಂದು ಹೆಸರು.

ನಿಷ್ಕಾಮ ಕರ್ಮನಿಷ್ಠೆಯ ರಹಸ್ಯವನ್ನು ಅರಿತು ಇರುವ ಚತುರ್ವರ್ಣ ದೇಹಸ್ಥರು ಧೃಢವಾದ ವೈರಾಗ್ಯವನ್ನು (voluntary poverty) ಪ್ರಯತ್ನ ಪೂರ್ವಕವಾಗಿ ಅಭ್ಯಾಸಮಾಡಿ ಇರ್ಕೆ ಇಲ್ಲದ ತೋರ್ಕೆರೂಪದ ಭೋಗೈ ಶ್ವರ್ಯಗಳ ಭೋಕ್ತೃತ್ವವನ್ನು ತೀವ್ರನಿಷ್ಠೆಯಿಂದ ಪರಿತ್ಯಜಿಸುತ್ತಾರೆ. ಉತ್ತಮ ಲೋಕಗಳೆಂದು ಪ್ರಸಿದ್ಧವಾಗಿರುವ ಬ್ರಹ್ಮ, ವೈಕುಂಠ ಕೈಲಾಸ ಲೋಕಗಳೂ ಅಲ್ಲಿನ ಉತ್ತಮ ವರ್ಗದ ಭೋಗೈಶ್ವರ್ಯಗಳೂ ತತ್ವತಃ ಅಸುಖ ರೂಪದ ದುಃಖ ಯೋನಯಗಳಾಗಿರುವ ರಹಸ್ಯವನ್ನು ಅವರು ಅರಿತು ಇರುವದರಿಂದ, ಅವುಗಳು ಅವರನ್ನು ಮೋಹಗೊಳಿಸಲು ಸಮರ್ಥ ವಾಗಿರುವದಿಲ್ಲ. ನಿಷ್ಕಾಮ ಕರ್ಮಿಗಳಿಗೆ ಬೇಕಾಗಿರುವದು, ಅವರಿಗೆ ಹೃದ್ದೇಶದ ನೈರ್ಮಲ್ಯ ಪ್ರಾಪ್ತವಾಗುವುದು ಹೃದ್ದೇಶದ ಈಶ್ವರನ ದರ್ಶನ ಮತ್ತು ದುಃಖ ಭಯವರ್ಜಿತವಾದ ಅಖಂಡ ಆನಂದ.

ಸಕಾಮ ಕರ್ಮ

ಭೋಗೈಶ್ವರ್ಯಗಳು ತತ್ವತಃ ಅಸುಖರೂಪದ ದುಃಖ ಯೋನಯ ಗಳಾಗಿರುವ ರಹಸ್ಯವನ್ನು ಅರಿಯದೆ ಮೋಹಿತರಾಗಿರುವ ಚತುರ್ವರ್ಣದ ಮಾನವರು, ಭೋಗೈಶ್ವರ್ಯಗಳ ಭೋಕ್ತೃತ್ವದ ಇಚ್ಛೆಯಿಂದ ಧರ್ಮ ಅವಿರುದ್ಧವಾದ ಕಾಮಗಳಿಂದ ಪ್ರೇರಿತರಾಗಿ ಆಚರಿಸುವ ಕರ್ಮಗಳಿಗೆ "ಸಕಾಮ ಕರ್ಮ"ಗಳೆಂದು ಹೆಸರು. ಮೋಹಿತರಾದ ಸಕಾಮ ಕರ್ಮಿ ಗಳಿಗೆ ಹೃದ್ದೇಶಸ್ಥವಾದ ಈಶ್ವರನ ದರ್ಶನವೂ ಹೃದ್ದೇಶಸ್ಥವಾದ ದುಃಖ

ಭಯುವರ್ಜಿತವಾದ ಶಾಶ್ವತವಾದ ಅಖಂಡ ಆನಂದ ದರ್ಶನವೂ ಇರುವದಿಲ್ಲ. ಈಶ್ವರನು ದೂರಸ್ಥನಾಗಿ ವೈಕುಂಠದಲ್ಲೋ ಕೈಲಾಸದಲ್ಲೋ ಎಲ್ಲೋ ಇದ್ದಾನೆಂದೂ ಅವನು ಕರೆದಾಗ ಬರುತ್ತಾನೆಂದೂ ಅವರು ಅರಿತು ದೂರಸ್ಥ ಈಶ್ವರನನ್ನು ಅಶಾಶ್ವತವಾದ ಇರ್ಕೆ ಇಲ್ಲದ ತೋರ್ಕೆರೂಪದ ಭೋಗೈಶ್ವರ್ಯಗಳಿಗಾಗಿ ಅರ್ಚಿಸುತ್ತಾರೆ. ಸಕಾಮಕರ್ಮಗಳು ಶಾಸ್ತ್ರ ನಿಯತವಾಗಿದ್ದರೂ, ಹೃದಯ ದೌರ್ಬಲ್ಯದಿಂದ ಕೂಡಿ ತೀವ್ರ ವೈರಾಗ್ಯ ನಿಷ್ಕಾಸಾಮರ್ಥ್ಯವಿಲ್ಲದ ಚತುರ್ವರ್ಣದ ಮಂದಾಧಿಕಾರಿಗಳಿಗೆ ಬುದ್ಧಿ ಭೇದವಾಗದಂತೆ ಹೇಳಲ್ಪಟ್ಟಿರುವ ಧರ್ಮಗಳು. ಹೃದಯ ನೈರ್ಮಲ್ಯ ವನ್ನುಂಟುಮಾಡುವ ಸಾಮರ್ಥ್ಯವು ನಿಷ್ಕಾಮಕರ್ಮಗಳಿಗೆ ಇರುವಂತೆ ಸಕಾಮಕರ್ಮಗಳಿಗೆ ಇರುವದಿಲ್ಲ. ಆದುದರಿಂದ ಸಕಾಮಕರ್ಮಿಗಳು ಈಶ್ವರಾರ್ಪಿತ ಬುದ್ಧಿಯಿಂದ ಕರ್ಮಗಳನ್ನು ಮಾಡುವದನ್ನೂ ಸರ್ವ ಕರ್ಮ ಗಳ ಫಲಭೋಕ್ತೃತ್ವವನ್ನು ತ್ಯಾಗಮಾಡುವದನ್ನೂ ಪ್ರಯತ್ನಪೂರ್ವಕ ವಾಗಿ ಅಭ್ಯಾಸಮಾಡಬೇಕು.

ಅಸುರ ಕರ್ಮ

ಅಸುರ ಕರ್ಮಗಳು ಎಂದರೆ ಶಾಸ್ತ್ರನಿಷಿದ್ಧ ಭೋಗಗಳಿಗಾಗಿ ನರಾಧಮರು ಮಾಡುವ ಶಾಸ್ತ್ರ ನಿಷಿದ್ಧ ಕರ್ಮಗಳು. ಗೀತಾಪ್ರೋಕ್ತನಾದ ಈಶ್ವರನು ಜಗದ್ವ್ಯಾಪಕನಾಗಿ ಅತ್ಯಂತ ಸಮೀಪಸ್ಥನಾಗಿ ಹೃದಯಸ್ಥನಾಗಿ ದ್ದರೂ ಗಮನಿಸದೆ, ಇವರು ಜಗತ್ತನ್ನು ಅನೀಶ್ವರ ಜಗತ್ತೆಂದೂ, ಜಗತ್ತು ಈಶ್ವರನಲ್ಲಿ ಪ್ರತಿಷ್ಠವಾಗಿರುವದು ಅಸತ್ಯವೆಂದೂ ತಮ್ಮ ಹೃದಯಸ್ಥವಾದ ಕಾಮವನ್ನು ಬಿಟ್ಟರೆ ಬೇರೆ ಈಶ್ವರನು ಇಲ್ಲವೆಂದೂ ಮೋಹಿತರಾಗಿ ಭೋಗೈಶ್ವರ್ಯಗಳಿಗಾಗಿ ಅಧಿಕವಾದ ಧಾವಂತವನ್ನುಪಡುತ್ತಾರೆ. ಧಾವಂತದಿಂದ ಮಾಡಲ್ಪಡುವ ಇವರ ಕರ್ಮಗಳಿಗೆ ದುಃಖಭಯುವರ್ಜಿತ ವಾದ ವಿಷಯ ಭೋಗಗಳು ಇಹದಲ್ಲೂ ಸಿಗುವದಿಲ್ಲ; ಪರದಲ್ಲೂ ಸಿಗುವ ದಿಲ್ಲ. ಈಶ್ವರ ದರ್ಶನವಿಲ್ಲದೆ ಇರುವ ಅಸುರ ಕರ್ಮಿಗಳಿಗೆ ದುಷ್ಕೃತರು ಎಂದು ಹೆಸರು. ದುಷ್ಕೃತರ ಅಸುರ ಕರ್ಮಗಳು ಹೃದಯದ ಮಾಲಿನ್ಯ ವನ್ನು ವೃದ್ಧಿಮಾಡಿ ಹೃದಯದಲ್ಲಿ ರಾಗ ಭಯ ಕ್ರೋಧ ಅಜ್ಞಾನಗಳನ್ನು ವೃದ್ಧಿಮಾಡುವ ಕರ್ಮಗಳೆಂದು ಗ್ರಹಿಸಬೇಕು.

ಹಿಂದಿನ ಜನ್ಮ ಮುಂದಿನ ಜನ್ಮಗಳ ಅರಿವೂ ಮತ್ತು ಹೃದ್ದೇಶಸ್ಥವಾದ ಅಖಂಡ ಆನಂದದ ಅರಿವೂ ಇಲ್ಲದ ಪಾಶ್ಚಿಮಾತ್ಯರು ನಿಷ್ಕಾಮ ಕರ್ಮ ಸಕಾಮಕರ್ಮನಿಷ್ಠರಾದ ಚತುರ್ವರ್ಣದ ಹಿಂದೂ ಸಮಾಜವನ್ನು ಅನಾಗರೀಕರಾದ ಮೂಢರ ಸಮಾಜವೆಂದು ಅರಿತು ಇರುತ್ತಾರೆ.

ಈ ಪ್ರಶ್ನೆಗೆ ಉತ್ತರ ಹೇಳಿ

೧. ನಿಷ್ಕಾಮಕರ್ಮ ಸಕಾಮಕರ್ಮಗಳೆಂದರೇನು? ಅದಕ್ಕೆ ಅಧಿಕಾರಿಗಳು ಯಾರು? ದುಷ್ಕೃತರು ಎಂದರೆ ಯಾರು?

೧೪. ಆರ್ಷೇಯ ಪ್ರವರ ಗೋತ್ರಗಳು

Ancestral Traditions and Culture

ಇಂದಿನ ಭಾರತದಲ್ಲಿ ಅನೇಕ ಭಾರತೀಯರು ವರ್ಣ ಆರ್ಷೇಯ ಪ್ರವರ ಗೋತ್ರಗಳ ಅವಶ್ಯಕತೆಯನ್ನು ಗಮನಿಸದೆ ವಿವಾಹಾದಿಗಳ ಮೂಲಕ ರಕ್ತಸಂಬಂಧವನ್ನು ಬೆಳಸುತಿದ್ದರೂ, ಅವುಗಳು ಪೂರ್ವ ಸಂಪ್ರದಾಯಗಳನ್ನು ಆಚರಿಸುತ್ತಲಿರುವ ಚತುರ್ವರ್ಣ ಧರ್ಮನಿಷ್ಠರಿಗೆ ಅವರ ವಂಶಾವಳಿಯ ಸಂಸ್ಕಾರಗಳ ಪವಿತ್ರತೆಯನ್ನು ರಕ್ಷಿಸಲು ಅವಶ್ಯಕವಾಗಿರುತ್ತವೆ. ದೇಶದಲ್ಲಿನ ಧರ್ಮನೀತಿ ಕೀರ್ತಿಯುತ ಜೀವನಕ್ಕೂ ಲೋಕಸಂಗ್ರಹ ಕಾರ್ಯಗಳಿಗೂ ಇತರರ ಅನುವರ್ತನೆಗೆ ಪ್ರಮಾಣದಂತೆ ಆದರ್ಶರಾದ ಕ್ಷತ್ರಿಯ ರಾಜರ ವಂಶೀಕರಿಗೂ ದ್ವಿಜೋತ್ತಮರಾದ ಬ್ರಾಹ್ಮಣ ವಂಶೀಕರಿಗೂ ಅತ್ಯವಶ್ಯಕವಾದದ್ದು. ಇವರು ಅಜಾಗ್ರತೆಯಿಂದ ವಿಸ್ಮೃತಿಹೊಂದಿದ ಕಾಲದಲ್ಲಿ, ಅಧರ್ಮ ಅನೀತಿಗಳು ಗುರುಕುಲದಂತೆ ಇರಬೇಕಾದ ಇವರ ಗೃಹಗಳನ್ನೂ, ದೇವಾಲಯಗಳಂತೆ ನಿರ್ಮಲವಾಗಿರಬೇಕಾದ ಅವರ ದೇಹಗಳನ್ನೂ ಗರ್ಭಗುಡಿಯಂತೆ ಪವಿತ್ರತೆಯಿಂದ ಇರಬೇಕಾದ ಅವರ ಹೃದ್ದೇಶಗಳನ್ನೂ, ಆಹಾರ ವ್ಯವಹಾರ ವಿವಾಹಾದಿಗಳ ಮೂಲಕ ಪ್ರವೇಶಿಸಿ ಹೃದ್ದೇಶಸ್ಥರಾದ ಪವಿತ್ರರಾದ ಜೀವರನ್ನು ಅಪವಿತ್ರರನ್ನಾಗಿ ಮಾಡುತ್ತವೆ. ಆದುದರಿಂದ ಚತುರ್ವರ್ಣ ಧರ್ಮನಿಷ್ಠರು ವಿಸ್ಮೃತಿಯನ್ನು ಹೊಂದದೆ ಅವರ ಕುಲ ಆರ್ಷೇಯ ಪ್ರವರ ಗೋತ್ರ ವೇದಶಾಖೆಗಳನ್ನೂ ಅವರ

ವಂಶಾವಳಿಯ ಪವಿತ್ರತೆಯನ್ನೂ ಪೂರ್ವಿಕರಿಂದ ಪರಂಪರ ಪ್ರಾಪ್ತವಾದ ಸಂಪ್ರದಾಯಗಳನ್ನೂ ಸ್ಮರಿಸುತ್ತಾ ಪವಿತ್ರವಾದ ಆಹಾರ ವ್ಯವಹಾರ ನಿಷ್ಠರಾಗಿ ವಿವಾಹಕ್ಕೆ ಪವಿತ್ರರಾದ ವಧೂವರರನ್ನು ಸ್ವೀಕರಿಸುವದನ್ನು ಪ್ರಯತ್ನಪೂರ್ವಕ ಅನುಷ್ಠಾನಮಾಡಿ ದೇಹಗಳ ನಿರ್ಮಲತೆಯನ್ನೂ ಹೃದಯಗಳ ಪವಿತ್ರತೆಯನ್ನೂ ಸಂತತಿಯ ಪವಿತ್ರತೆಯನ್ನೂ ರಕ್ಷಿಸಬೇಕು. ಆರ್ಷೇಯ ಪ್ರವರ ಗೋತ್ರಗಳ ಅರಿವು ಇಲ್ಲದೆ ವಿವಾಹದಿಂದ ವರ್ಣಸಂಕರ ಸಂತಾನವನ್ನು ಪಡೆಯುವದೂ ಅಥವಾ ಸಂತಾನನಿರೋಧಕ್ರಮವನ್ನು (Contraceptive) ಕೈಗೊಳ್ಳುವುದೂ ಅಸುರ ಸ್ವಭಾವದ ಮಾನವರನ್ನು ರಾಕ್ಷಸರನ್ನಾಗಿಮಾಡುವದಲ್ಲದೆ ಗೃಹಗಳಲ್ಲಿನ ಬಾಲಕ ಬಾಲಕಿಯರನ್ನು ರಾಕ್ಷಸರಾಗಿ ಬೆಳೆಯುವಂತೆ ಶಿಕ್ಷಣವನ್ನು ಕೊಟ್ಟಂತಾಗುತ್ತದೆ. ವರ್ಣ ಸಂಕರ ವಿವಾಹ ಸಂತಾನನಿರೋಧ ಪ್ರಯೋಗಗಳನ್ನು ಪಾಶ್ಚಿಮಾತ್ಯರು ಸಮಾಜದ ನಾಗರೀಕತೆಯ ಸೂಚನೆಗಳೆಂದು ಆಚರಿಸುತ್ತಾರೆ. ಆದರೆ ಭಾರತೀಯ ಪೂರ್ವೀಕರು ಅವುಗಳನ್ನು ಕುಲಕ್ಷಯ ಕೃತದೋಷಗಳೆಂದು ತಿಳಿದಿರುತ್ತಾರೆ.

ಈ ಪ್ರಶ್ನೆಗೆ ಉತ್ತರ ಹೇಳಿ

೧. ವರ್ಣಸಂಕರ ವಿವಾಹಗಳನ್ನು ಕುಲಕ್ಷಯ ಕೃತದೋಷವೆಂದು ಏಕೆ ತಿಳಿಯಬೇಕು?

೧೫. ಕುರುವೃದ್ಧ ಪಿತಾಮಹ ಭೀಷ್ಮ ದ್ವಿಜೋತ್ತಮ ದ್ರೋಣ

Elderly Men in High Esteem Setting up Bad Examples to the Existing and Coming Generations

ಲೋಕದಲ್ಲಿನ ವೃದ್ಧರೂ ಮತ್ತು ಪೂಜಾರ್ಹರೂ ಆದ ಕ್ಷತ್ರಿಯರ ಮತ್ತು ಬ್ರಾಹ್ಮಣರ ಆಚಾರ ವ್ಯವಹಾರಗಳೂ ಅವರ ಗೃಹಜೀವನ ಸಾಮಾಜಿಕ ಜೀವನವೂ ದೇಶದಲ್ಲಿನ ಇತರ ಜನರ ಅನುವರ್ತನೆಗೆ ಪ್ರಮಾಣ ದಂತೆ ಇರುವದರಿಂದ, ಲೋಕದಲ್ಲಿನ ಕರ್ಮಸಂಗಿಗಳಾದ ಮುಂದಾಳಿಕಾರಿ ಗಳಿಗೆ ಬುದ್ಧಿಭೇದವಾಗದಂತೆ ಅವರು ಧರ್ಮದಿಂದಲೂ ನೀತಿಯಿಂದಲೂ

ಶರೀರ ಯಾತ್ರೆಯನ್ನು ಮಾಡುತ್ತಾ ಲೋಕಸಂಗ್ರಹವನ್ನು ಮಾಡಬೇಕು. ಅವರು ಕುಲಧರ್ಮ ಜಾತಿಧರ್ಮಭ್ರಷ್ಟರಾಗಿ ಅಧರ್ಮದಿಂದಲೂ ಅನೀತಿಯಿಂದಲೂ ವರ್ತಿಸುವದರಿಂದ, ಅವರ ವರ್ತನೆಯು ಇತರ ಜನರಿಗೆಲ್ಲಾ ಆದರ್ಶವಾಗಿ ದೇಶದಲ್ಲಿನ ಚತುರ್ವರ್ಣದವರೆಲ್ಲಾ ಅನುವರ್ತಿಸುವದರಿಂದ ವಂಶಪರಂಪರೆಯಾಗಿ ಅನುಷ್ಠಾನದಲ್ಲಿದ್ದ ಪೂರ್ವ ಸಂಪ್ರದಾಯಗಳೂ ಕುಲಧರ್ಮ ಜಾತಿಧರ್ಮಗಳೂ ಶಾಶ್ವತವಾಗಿ ನಷ್ಟವಾಗುತ್ತವೆ. ಪೂರ್ವ ಸಂಪ್ರದಾಯಗಳೂ ಕುಲಧರ್ಮ ಜಾತಿಧರ್ಮಗಳು ನಷ್ಟವಾಗುವದರಿಂದ ಕುಲಸ್ತ್ರೀಯರು ದುಷ್ಕೃತ್ಯಗಳಲ್ಲಿ ತೊಡಗುವರು. ಅವರ ದುಷ್ಕೃತ್ಯಗಳಿಂದ ವರ್ಣಸಂಕರರು ಅಧಿಕಸಂಖ್ಯೆಯಲ್ಲಿ ಜನಿಸಿ ದೇಶದಲ್ಲಿ ಅಧರ್ಮ ಅನೀತಿ ವರ್ತನೆಗಳೇ ಗೃಹಗಳಲ್ಲೂ ಸಮಾಜಗಳಲ್ಲೂ ನೆಲಸಿ ಚತುರ್ವರ್ಣ ಧರ್ಮ ನಿಷ್ಠರಾದ ಸಾಧುಸಜ್ಜನರಿಗೆ ಗೃಹಗಳಲ್ಲೂ ಸಮಾಜದಲ್ಲೂ ದೇಶದಲ್ಲೂ ರಕ್ಷಣೆ ಇಲ್ಲದೆ ದೇಶವು ಕ್ರಮೇಣ ಅಸುರ ರಾಜ್ಯವಾಗಿ ಪರಿಣಮಿಸುತ್ತದೆ. ಆದುದರಿಂದ ಅಧರ್ಮ ಅನೀತಿ ಅಕೀರ್ತಿವರ್ತನೆಗಳಲ್ಲಿ ನಿರತರಾದ ಕ್ಷತ್ರಿಯ ಶ್ರೇಷ್ಠರೂ ಪೂಜಾರ್ಹರಾದ ಬ್ರಾಹ್ಮಣ ಶ್ರೇಷ್ಠರೂ ಕುಲಕ್ಷಯ ಕೃತದೋಷಿಗಳೆಂದು ರಾಕ್ಷಸರಿಗೆ ಸಮಾನರೆಂದೇ ಪರಿಗಣಿಸಲ್ಪಡಬೇಕು. ತ್ರೇತಾಯುಗದಲ್ಲಿ ದ್ವಿಜೋತ್ತಮನೂ ಲಂಕಾಧಿಪತಿಯೂ ಆದ ರಾವಣನ ಅನೀತಿ ಅಧರ್ಮವರ್ತನೆಗಳಿಂದ ದೇಶದಲ್ಲಿ ಅಧರ್ಮ ಅನೀತಿಗಳು (Satans rule) ಅಭ್ಯುತ್ಥಾನವಾಗುತ್ತಿರಲು ಲೋಕಸಂಗ್ರಹ ದೃಷ್ಟಿಯಿಂದ ಕ್ಷತ್ರಿಯ ರಾಜನಾದ ಶ್ರೀರಾಮನು ರಾವಣನನ್ನು ಯುದ್ಧದಲ್ಲಿ ಸಂಹರಿಸಿ ಧರ್ಮ ನೀತಿ ಕೀರ್ತಿಯುತ ಜೀವನವು ಚತುರ್ವರ್ಣ ಧರ್ಮನಿಷ್ಠರಾದ ಹಿಂದೂಜನರ ಗೃಹಗಳಲ್ಲೂ ಸಮಾಜದಲ್ಲೂ ಸ್ಥಿರವಾಗಿ ನೆಲಸುವಂತೆ ಧರ್ಮಸಂಸ್ಥಾಪನೆಯನ್ನು (God's rule) ಮಾಡಿದನು.

ಧಾರ್ತರಾಷ್ಟ್ರರ ಆಸ್ಥಾನದಲ್ಲಿದ್ದ ಕುರುವೃದ್ಧ ಪಿತಾಮಹನೂ ಕ್ಷತ್ರಿಯಶ್ರೇಷ್ಠನೂ ಆದ ಭೀಷ್ಮನೂ, ಶಸ್ತ್ರ-ಅಸ್ತ್ರ ವಿದ್ಯಾಗುರುವೂ ದ್ವಿಜೋತ್ತಮನೂ ಆದ ದ್ರೋಣನೂ, ದ್ರೌಪದಿಯ ವಸ್ತ್ರಾಪಹರಣ ಕಾಲದಲ್ಲಿ ದುಷ್ಕೃತರಾದ ಧಾರ್ತರಾಷ್ಟ್ರರನ್ನು ಅನೀತಿವರ್ತನೆಗಾಗಿ ಲೋಕ ಸಂಗ್ರಹದೃಷ್ಟಿಯಿಂದ ಅವರನ್ನು ಶಿಕ್ಷಿಸದೆ ಕರ್ತವ್ಯಭ್ರಷ್ಟರಾದರು. ಇದೂ ಅಲ್ಲದೆ ದುಷ್ಕೃತರ ಆಶ್ರಯದಲ್ಲೇ ಇದ್ದು ಅವರ ದುರ್ಬುದ್ಧಿ

ಯುದ್ಧಕ್ಕೆ ಉತ್ತೇಜನವನ್ನು ಕೊಟ್ಟು ಕರ್ಮಸಂಗಿಗಳಾದ ಇತರ ಜನರಿಗೆ ಬುದ್ಧಿ ಭೇದವಾಗುವಂತೆ ಯುದ್ಧಕ್ಕೆ ಪ್ರಮುಖರಾಗಿ ನಿಂತು ಸಾಧುಗಳಾದ ಪಾಂಡವರನ್ನೇ ವಿನಾಶಮಾಡಲು ಉದ್ಯುಕ್ತರಾಗಿದ್ದರು. ಪೂಜಾರ್ಹರಾಗಿದ್ದರೂ ಅಧರ್ಮ ಅನೀತಿಗಳಿಂದ ರಾಕ್ಷಸರಂತೆ ವರ್ತಿಸಿದ ಭೀಷ್ಮ ದ್ರೋಣರನ್ನು ಯುದ್ಧದಲ್ಲಿ ಸಂಹರಿಸಿ ದೇಶದಲ್ಲಿ ಧರ್ಮನೀತಿ ಕೀರ್ತಿಯುತ ಜೀವನವನ್ನು (God's rule) ಸಂಸ್ಥಾಪನೆ ಮಾಡುವದೇ ತನ್ನ ಶ್ರೇಯಸ್ಕರವಾದ ಕರ್ತವ್ಯವೆಂಬ ರಹಸ್ಯವನ್ನು ಅರ್ಜುನನು ಭಗವಂತನಾದ ಶ್ರೀಕೃಷ್ಣನಿಂದ ಅರಿತು, ಪೂಜಾರ್ಹರಾದ ಭೀಷ್ಮ ದ್ರೋಣರನ್ನು ಕೊಲ್ಲುವದಿಲ್ಲವೆಂದು ಯುದ್ಧವನ್ನು ನಿಲ್ಲಿಸಿದ್ದವನು, ಇತರ ಜನರಿಗೆ ಬುದ್ಧಿ ಭೇದವಾಗದಂತೆ ಲೋಕಸಂಗ್ರಹದೃಷ್ಟಿಯಿಂದ ಯುದ್ಧಮಾಡಿ ಕೊಲ್ಲಲು ಪುನಃ ನಿಶ್ಚಯಿಸಿ ಅವರನ್ನು ಸಂಹರಿಸಿದನು.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಪೂಜಾರ್ಹರಾದ ಭೀಷ್ಮ ದ್ರೋಣರನ್ನು ಕೃಷ್ಣಾರ್ಜುನರು ಸಂಹರಿಸಲು ಕಾರಣವೇನು?

೨. ಲೋಕಸಂಗ್ರಹ ಕಾರ್ಯವೆಂದರೇನು?

೧೬. ಕುಲಸ್ತ್ರೀಯರ ವಿದ್ಯಾಭ್ಯಾಸ ಮತ್ತು ಗೃಹಜೀವನ

Cultural Education and Home Life of the Hindu Women

ಭರತಖಂಡವು ಬ್ರಿಟಿಷರ ಆಡಳಿತಕ್ಕೆ ವಶವಾದ ಮೇಲೆ ಪಾಶ್ಚಿಮಾತ್ಯರ ಮನೋಭಾವವೂ ಅವರ ಸಂಪ್ರದಾಯಗಳೂ ಹಿಂದೂ ಗೃಹಗಳನ್ನು ಪ್ರವೇಶಿಸಿ ಹಿಂದೂ ಕುಲಸ್ತ್ರೀಯರ ಮನಸ್ಸುಗಳಲ್ಲಿ ಅನೇಕ ವಿಧವಾದ ಪರಿಣಾಮಗಳನ್ನುಂಟುಮಾಡಿರುತ್ತವೆ. ಹಿಂದೂ ಸ್ತ್ರೀಯರು ಪಾಶ್ಚಿಮಾತ್ಯ ಸ್ತ್ರೀಯರಂತೆ, ಸ್ವತಂತ್ರರೂ ನಾಗರೀಕರೂ ಅಲ್ಲವೆಂದು ಮನೋಭಾವವನ್ನು ಹೊಂದಿರುತ್ತಾರೆ. ಸ್ತ್ರೀಯರ ಸ್ವಭಾವನಿಯತವಾದ ಗೃಹಧರ್ಮಗಳಲ್ಲೂ ಗೃಹಕೃತ್ಯಗಳಲ್ಲೂ ಪತಿವ್ರತಾಧರ್ಮನಿಷ್ಠೆಯಲ್ಲಿಯೂ ಶಿಕ್ಷಣವನ್ನು ಪಡೆಯುವದಕ್ಕೆಬದಲು ಪಾಶ್ಚಿಮಾತ್ಯ ಸ್ತ್ರೀಯರಂತೆ ಪುರುಷರಿಗೆ ಸಮಾನರಾಗಲು ಮತ್ತು ಮೀರಿಸಲು ಸಾಮಾಜಿಕ ರಾಜ್ಯಾಂಗರಚನಾ

ಕಾರ್ಯ ಶಿಕ್ಷಣ ಮತ್ತು ಅನೇಕ ವಿಧದ ಪಾಶ್ಚಿಮಾತ್ಯ ಕಲೆಗಳ ಶಿಕ್ಷಣವನ್ನೂ ಪಡೆಯುತ್ತಲಿರುತ್ತಾರೆ. ಇದರ ಪರಿಣಾಮವಾಗಿ ಚತುರ್ವರ್ಣದ ಹಿಂದೂ ಗೃಹಗಳಲ್ಲಿ ಪೂರ್ವದಲ್ಲಿದ್ದ ಆರ್ಥಿಕ ಜೀವನದ ಮಟ್ಟವೂ ನೈತಿಕ ಜೀವನದ ಮಟ್ಟವೂ ತಲೆಕೆಳಗಾಗಿ ವಿವಾಹ ವಯಸ್ಸಿನ ಯುವತಿಯರ ವಿವಾಹಕ್ಕೆ ಸಂಪ್ರದಾಯಸ್ಥರಾದ ವರರು ಸಿಗದೆ ಅವಿವಾಹಿತ ಯುವತಿಯರ ಸಂಖ್ಯೆಯು ಹೆಚ್ಚುತ್ತಲಿದೆ. ಆದರೆ ಪಾಶ್ಚಿಮಾತ್ಯರಂತೆ ನಾಗರೀಕರಾದ ಕೆಲವು ಸ್ತ್ರೀಯರು ಪೂರ್ವಸಂಪ್ರದಾಯದ ಕಟ್ಟುಗಳಿಗೆ ಹೆದರದೆಯೂ ಕುಲ ಆರ್ಷೇಯ ಪ್ರವರ ಗೋತ್ರ ಸಂಸ್ಕಾರಗಳಿಗೆ ಗಮನಕೊಡದೆಯೂ ಅಂತರ್ಜಾತೀಯ ಬಹಿರ್ಜಾತೀಯ ಅಂತರಾಷ್ಟ್ರೀಯ ಬಹಿರಾಷ್ಟ್ರೀಯರನ್ನು ವಿವಾಹಿತರಾಗಿ ಪ್ರತ್ಯೇಕ ಸಂಸಾರಗಳನ್ನು ಹೂಡಿ ಸಂತಾನವನ್ನು ಪಡೆಯುತ್ತಿದ್ದಾರೆ. ಹಿಂದೂ ವಿಧವೆಯರೂ ಕೆಲವು ಗೃಹಗಳಲ್ಲಿ ಪಾಶ್ಚಿಮಾತ್ಯ ಸ್ತ್ರೀಯರಂತೆ ಪುನರ್ವಿವಾಹವನ್ನು ಮಾಡಿಕೊಂಡು ತಮ್ಮ ಪವಿತ್ರತೆಯನ್ನು ಅಲ್ಲಗಳೆಯುತ್ತಲಿರುತ್ತಾರೆ. ಪಾಶ್ಚಿಮಾತ್ಯ ಪದ್ಧತಿಗಳನ್ನು ಅನುಸರಿಸುತ್ತಿರುವ ಕುಲಸ್ತ್ರೀಯರ ಅನೀತಿವರ್ತನೆಗಳಿಂದ ಜನಿಸಿದ ವರ್ಣಸಂಕರ ಸಂತಾನವು ದೇಶದಲ್ಲಿ ವರ್ಷೇ ವರ್ಷೇ ಅಧಿಕವಾಗುತ್ತಿದೆ. ಈ ಪರಿಸ್ಥಿತಿಯು ಪಾಶ್ಚಿಮಾತ್ಯ ರಾಜ್ಯಗಳಲ್ಲಿ ವ್ಯಂಗ್ಯವಾಗಿ ಕಾಣಬರದಿದ್ದರೂ ಹಿಂದೂ ದೇಶದಲ್ಲಿ ಹಿಂದೂ ಸಮಾಜದಲ್ಲಿ ಹಿಂದೂ ಗೃಹಗಳಲ್ಲಿ ನೈತಿಕವಾದ ಕಳಂಕವನ್ನೂ ಸಮಸ್ಯೆಯನ್ನೂ ಉಂಟುಮಾಡಿದೆ.

ಬ್ರಿಟಿಷರು ಭರತಖಂಡವನ್ನು ಬಿಟ್ಟು ಹೊರಟು ಹೋದಾಗ್ಯೂ ಹಿಂದೂ ಕುಲಸ್ತ್ರೀಯರ ಮನಗಳನ್ನೂ ಪ್ರವೇಶಿಸಿ ಅಪವಿತ್ರವನ್ನಾಗಿ ಮಾಡಿರುವ ಪಾಶ್ಚಿಮಾತ್ಯ ಸಂಪ್ರದಾಯಗಳ ಸಂಸ್ಕಾರಗಳು ಅವರನ್ನು ಬಿಟ್ಟುಹೋಗದೆ ಅನೇಕ ಪ್ರಕಾರದಿಂದ ವಶದಲ್ಲಿಟ್ಟುಕೊಂಡು ಆಡಳಿತವನ್ನು ಮಾಡುತ್ತಿವೆ. ಆದುದರಿಂದ ಕುಲಸ್ತ್ರೀಯರ ಮನವನ್ನು ಆಕ್ರಮಿಸಿರುವ ಅಪವಿತ್ರವಾದ ಪಾಶ್ಚಿಮಾತ್ಯ ಸಂಪ್ರದಾಯದ ಸಂಸ್ಕಾರಗಳನ್ನು ನಿರ್ಮೂಲಮಾಡಿ, ಪವಿತ್ರವಾದ ಹಿಂದೂ ಪೂರ್ವಿಕರು ಆಚರಿಸುತ್ತಿದ್ದ ಪರಂಪರ ಪ್ರಾಪ್ತವಾಗಿರುವ ಹಿಂದೂ ಸಂಪ್ರದಾಯಗಳು ಅವರ ಮನಗಳನ್ನು ಪುನಃ ಪ್ರವೇಶಿಸಿ ನೆಲಸುವಂತೆ ಮಾಡುವದೇ ಸ್ವತಂತ್ರ ಭಾರತದ ವಿದ್ಯಾಶಾಖೆಯು ಪ್ರಥಮತಃ ಕೈಗೊಳ್ಳಬೇಕಾದ ಕಾರ್ಯಕ್ರಮ.

ಕುಲಸ್ತ್ರೀಯರನ್ನು ಚತುರ್ವರ್ಣ ಧರ್ಮನಿಷ್ಠರನ್ನಾಗಿಮಾಡಿ ಗೃಹಧರ್ಮಗಳಲ್ಲಿಯೂ ಗೃಹಕೃತ್ಯಗಳಲ್ಲಿಯೂ ಪತಿವ್ರತಾಧರ್ಮನಿಷ್ಠೆಯಲ್ಲಿಯೂ ಆದರ್ಶರಾಗಿರುವಂತೆ ನೈತಿಕ ಶಿಕ್ಷಣೆಯನ್ನು ಕೊಟ್ಟು ವರ್ಣ ಆರ್ಷೇಯ ಪ್ರವರಗೋತ್ರಗಳನ್ನು ಗಮನಿಸಿ ವಿವಾಹಿತರಾಗಲು ಮನೋಭಾವವನ್ನುಂಟುಮಾಡುವದೇ ವಿದ್ಯಾಶಾಖೆಯು ಕೈಗೊಳ್ಳಬೇಕಾದ ದ್ವಿತೀಯ ಕಾರ್ಯಕ್ರಮ. ಚತುರ್ವರ್ಣದ ಹಿಂದೂಗೃಹಗಳಲ್ಲಿ ಪೂರ್ವದಲ್ಲಿದ್ದ ಆರ್ಥಿಕ ಜೀವನದ ಮಟ್ಟವೂ ನೈತಿಕ ಜೀವನದ ಮಟ್ಟವೂ ಅವಿವಾಹಿತ ಸ್ತ್ರೀಯರಿಂದ ತಲೆಕೆಳಗಾಗಿರುವದರಿಂದ ಅವಿವಾಹಿತ ಯುವತಿಯರಿಗೆ ವಿವಾಹಕ್ಕೆ ಸರಿಯಾದವರು ಸಿಗದೇ ಇರುವ ಪರಿಸ್ಥಿತಿಯನ್ನು ಉತ್ತಮಗೊಳಿಸಿ ವಿವಾಹದ ವಯಸ್ಸು ಮೀರುವದಕ್ಕೆ ಮುಂಚೆಯೇ ಅವರು ವಿವಾಹಿತರಾಗಿ ಗೃಹಣಿಯರಾಗಿ ನಿಲ್ಲಲು ಸೌಕರ್ಯಗಳನ್ನು ಒದಗಿಸುವದೇ ವಿದ್ಯಾಶಾಖೆಯು ಕೈಗೊಳ್ಳಬೇಕಾದ ತೃತೀಯ ಕಾರ್ಯಕ್ರಮ. ಸ್ತ್ರೀಧರ್ಮಕ್ಕೆ ಕಳಂಕವನ್ನು ತರದ ಸ್ವಗೃಹಗಳಲ್ಲಿ ಆಚರಿಸಬಹುದಾದ ಕೈಗಾರಿಕೆ ಕೈಕೆಲಸ ಉದ್ಯೋಗ ಸೇವೆಗಳಲ್ಲಿ ವಿದ್ಯಾಶಾಖೆಯು ಶಿಕ್ಷಣವನ್ನು ಕೊಡಬೇಕು. ಭಾರತವು ನೈತಿಕ ರಾಜ್ಯವಾದುದರಿಂದ ವಿದ್ಯಾಶಾಖೆಯು ನೈತಿಕ ಶಿಕ್ಷಣಗಳಿಗೆ ಅಧಿಕವಾದ ಗಮನವನ್ನು ಕೊಡಬೇಕು.

ಪೂರ್ವಕಾಲದಲ್ಲಿ ಕುಲಸ್ತ್ರೀಯರಿಗೆ ವಿವಾಹಕ್ಕೆ ಪೂರ್ವದಲ್ಲಿ ಅವರ ತೌರುಮನೆಯೂ ವಿವಾಹಾನಂತರ ಅವರ ಅತ್ತೆಮನೆಯೂ ವಿದ್ಯಾಭ್ಯಾಸ ಕೇಂದ್ರಗಳಾಗಿದ್ದವು. ಅವರು ತಂದೆತಾಯಿಗಳ ಮನೆಗಳಲ್ಲಿರುವತನಕ ಅವರ ಸ್ವಭಾವನಿಯುತವಾದ ಗ್ರಹಕೃತ್ಯಗಳನ್ನೂ ಧರ್ಮನೀತಿ ಕೀರ್ತಿಯುತ ಜೀವನವನ್ನು ನಿರ್ವಹಿಸಲು ಪ್ರಥಮ ಶಿಕ್ಷಣವನ್ನೂ ಪಡೆಯುತ್ತಿದ್ದರು. ವಿವಾಹಾನಂತರ ಹೆಚ್ಚಿನ ಶಿಸ್ತಿನಿಂದ ಗೃಹಕೃತ್ಯಗಳನ್ನೂ ಧರ್ಮನೀತಿ ಕೀರ್ತಿಯುತ ಸುಖಜೀವನವನ್ನು ನಿರ್ವಹಿಸಲು ಅತ್ತೆಮನೆಯಲ್ಲಿ ಉನ್ನತ ಶಿಕ್ಷಣವನ್ನೂ ಪಡೆಯುತ್ತಿದ್ದರು. ಅವರ ಗೃಹಗಳಲ್ಲಿ ನರಾಧಮರೂ ವರ್ಣಸಂಕರರೂ ಜನಿಸದೆ, ಶ್ರೀಮಂತ ಕ್ಷತ್ರಿಯನಾದ ದಿಲೀಪನ ಗೃಹದಲ್ಲಿ ರಘುಚಕ್ರವರ್ತಿ ಜನಿಸಿದಂತೆಯೂ, ಧೀಮಂತ ಬಡಬ್ರಾಹ್ಮಣನಾದ ಉದ್ದಾಲಕನ ಗೃಹದಲ್ಲಿ ಶೃತಿ ಪ್ರಸಿದ್ಧನಾದ ಶ್ವೇತಕೇತು ಜನಿಸಿದಂತೆಯೂ ನರಶ್ರೇಷ್ಠರೇ ಜನಿಸುತ್ತಿದ್ದರು. ಇವರ ನೈತಿಕ ಜೀವನದ ಮಟ್ಟವು ಉನ್ನತ

ವಾಗಿದ್ದುದರಿಂದ ಇವರು ಇಂದಿನ ಸ್ತ್ರೀಯರಂತೆ ಅಧಿಕ ಸಂತಾನವನ್ನು ಪಡೆಯುತ್ತಿರಲಿಲ್ಲ. ಇವರಿಗೆ ಮಕ್ಕಳಾದ ನಂತರ ಗೃಹದಲ್ಲಿ ಹೆಚ್ಚಿನ ಜವಾಬ್ದಾರಿಯೂ ಗೌರವವೂ ದೊರೆಯುತ್ತಿತ್ತು. ಇವರನ್ನು ತಮ್ಮ ಮನೆಗೆ ಬಂದ ಗೃಹಲಕ್ಷ್ಮಿ ಎಂದು ಪತಿಯೂ ಅತ್ತೆಮಾವಂದಿರೂ ಪ್ರೀತಿಸುತ್ತಿದ್ದುದಲ್ಲದೆ ಇವರ ನೀತಿ ಕೀರ್ತಿಯುತ ಸುಖ ಜೀವನವು ಗೃಹದಲ್ಲಿನ ಬಾಲಕ ಬಾಲಕಿಯರಿಗೆಲ್ಲಾ ಆದರ್ಶವಾಗುತ್ತಿತ್ತು. ಪತಿವ್ರತಾ ಶಿರೋಮಣಿಗಳಾದ ಇವರಿಗೆ ಪತಿಯು ಅರ್ಧಾಂಗಿ ಎಂದೂ ಸಹಧರ್ಮಿಣಿ ಎಂದೂ ಹೆಸರು ಇತ್ತು. ಪೂರ್ವ ಸಂಪ್ರದಾಯದ ಕುಲಸ್ತ್ರೀಯರಿಗೆ ಪತಿಯ better half ಎಂದು ಹೆಸರು ಪಡೆಯಬೇಕೆಂಬ ಧ್ಯೇಯವು ಇರುತ್ತಿರಲಿಲ್ಲ. ಕುಲ ಸ್ತ್ರೀಯರಿಗೆ ಜೀವಿತ ಕಾಲದಲ್ಲಿ ಪತಿವ್ರತಾ ಶಿರೋಮಣಿಎಂದು ಹೆಸರನ್ನು ಪಡೆಯುವುದೂ ಅಂತ್ಯಕಾಲದಲ್ಲಿ ಸುಮಂಗಲಿಯಾಗಿ ಮರಣವನ್ನು ಹೊಂದುವುದೂ ಎಂದರೆ ಒಂದು ದೊಡ್ಡ ಹೆಮ್ಮೆ ಆಗಿರುತ್ತಿತ್ತು. ಅರುಂಧತಿ, ಅನಸೂಯೆ, ಸುದಕ್ಷಿಣಾದೇವಿ, ಸಾವಿತ್ರಿ, ಸೀತಾದೇವಿ, ಚಂದ್ರಮತಿ, ದಮಯಂತಿ ಇವರೆಲ್ಲಾ ಶೃತಿಪ್ರಸಿದ್ಧರಾದ ಪತಿವ್ರತಾಶಿರೋಮಣಿಗಳಾದ ಸುಮಂಗಲಿಗಳು. ವಿವಾಹಿತರಿಗೆ ಅರುಂಧತಿ ದರ್ಶನವನ್ನು ಮಾಡಿಸುವುದು ಹಿಂದೂ ಗೃಹಗಳಲ್ಲಿ ಇಂದಿಗೂ ನಡೆಯುತ್ತಿದೆ. ವಿವಾಹಿತ ಸ್ತ್ರೀಯರು ಅರುಂಧತಿಯಂತೆ ಶರೀರಯಾತ್ರೆಯನ್ನು ಮಾಡಬೇಕೆಂಬುದೇ ಇದರ ಉದ್ದಿಶ್ಯ. ಅನಸೂಯೆಯು ಪಾತಿವ್ರತ್ಯ ಸಾಮರ್ಥ್ಯಕ್ಕೆ ಆದರ್ಶಳಾದ ಬ್ರಹ್ಮ ವಿಷ್ಣು ಮಹೇಶ್ವರರ ಮೆಚ್ಚಿಗೆಗೆ ಪಾತ್ರಳಾದ ಕುಲಸ್ತ್ರೀ. ಸುದಕ್ಷಿಣಾ ದೇವಿ ನರಶ್ರೇಷ್ಠನಾದ ರಘುವಿಗೆ ಜನ್ಮವನ್ನು ಕೊಟ್ಟ ತಾಯಿ. ಸಾವಿತ್ರಿಯು ಯಮನನ್ನು ಎದುರಿಸಿ ಪತಿಯ ಪ್ರಾಣವನ್ನು ಉಳಿಸಿಕೊಂಡು ಸುಮಂಗಲಿ ಯಾಗಿದ್ದ ಸತಿ. ಸೀತಾದೇವಿ, ಚಂದ್ರಮತಿ, ದಮಯಂತಿ ಇವರೆಲ್ಲಾ ತಮ್ಮ ಪತಿವ್ರತಾ ಸಾಮರ್ಥ್ಯದಿಂದ ಜೀವನದಲ್ಲಿನ ಕಷ್ಟಗಳನ್ನು ನಿರ್ವಹಿಸಿ ಪಾತಿವ್ರತ್ಯವನ್ನು ಕಾಪಾಡಿಕೊಂಡು ಆದರ್ಶರಾದ ಕುಲಸ್ತ್ರೀಯರು. ಇವರು ತಮ್ಮ ಅದ್ಭುತ ಶಕ್ತಿಯನ್ನು ಯಾವ ರೀತಿ ಪಡೆದಿದ್ದರು ಎಂಬ ರಹಸ್ಯವನ್ನು ಇಂದಿನ ಕುಲಸ್ತ್ರೀಯರು ಗಮನಿಸಬೇಕು. ಅವರ ಅನುಷ್ಠಾನ ಗಳನ್ನೂ ಗೃಹಜೀವನವನ್ನೂ ತಮ್ಮ ಗೃಹಜೀವನದಲ್ಲಿ ಅನುಸರಿಸಬೇಕು. ಅಂತ್ಯಕಾಲದಲ್ಲಿ ಸುಮಂಗಲಿಯರಾಗಿ ಮರಣವನ್ನು ಹೊಂದಲು

ಅದಕ್ಕಾಗಿ ಏರ್ಪಟ್ಟಿರುವ ಅಮಾವಾಸ್ಯೆ ಸೋಮವಾರ ವ್ರತ ಮಂಗಳಗೌರೀ ವ್ರತ ಇತ್ಯಾದಿ ಶಾಸ್ತ್ರನಿಯತ ವ್ರತಗಳನ್ನು ಅನುಷ್ಠಾನ ಮಾಡುತ್ತಿದ್ದರು. ತಮ್ಮ ವಿವಾಹಿತ ಪತಿಯನ್ನು ಮೋಹದರ್ಶನದಿಂದ ಶರೀರ ಸುಖಕ್ಕಾಗಿ ವಿವಾಹವಾದ ಪತಿಯೆಂದು ದರ್ಶಿಸುತ್ತಿರಲಿಲ್ಲ. ಮನುಷ್ಯ ದೇಹದ ಪತಿಯನ್ನೇ ಸಾಕ್ಷಾತ್ಪರಬ್ರಹ್ಮನೆಂದು ದರ್ಶಿಸುವ ದರ್ಶನವನ್ನು ಪ್ರಯತ್ನ ಪೂರ್ವಕವಾಗಿ ಅಭ್ಯಾಸಮಾಡುತ್ತಿದ್ದರು. ಪಾಶ್ಚಿಮಾತ್ಯ ಸಂಪ್ರದಾಯ ಗಳನ್ನೇ ಅನುಸರಿಸುತ್ತಾ ಬೆಳೆಯುತ್ತಿರುವ ಸ್ತ್ರೀಯರು ಈ ವ್ರತಗಳು ಹಾಸ್ಯಾಸ್ಪದವಾದ ಅನಾಗರೀಕದ ಮೂಢಭಾವನೆಗಳೆಂದು ತಿಳಿದಿರುತ್ತಾರೆ. ಪೂರ್ವಕಾಲದಲ್ಲಿ ವಿಧವೆಗಳ ಸಂಖ್ಯೆ ಇಂದಿನ ಕಾಲದಲ್ಲಿರುವಂತೆ ಅಧಿಕ ವಾಗಿರಲಿಲ್ಲ. ಪರಬ್ರಹ್ಮನೆಂದು ದರ್ಶಿಸುತ್ತಿದ್ದ ಸತಿಯ ಪತಿಯು ಅಕಾಲ ಮರಣಹೊಂದಿದ ಸಂದರ್ಭದಲ್ಲಿ ಪತಿಯ ದೇಹದ ಸಂಗಡ ತಾವೂ ಚಿತೆಯನ್ನು ಹತ್ತಿ ಸುಮಂಗಲತ್ವವನ್ನು ಉಳಿಸಿಕೊಳ್ಳುತ್ತಿದ್ದರು. ಈ ರೀತಿಯ ಉತ್ತಮ ಸಾಮರ್ಥ್ಯವಿಲ್ಲದಿದ್ದ ಸ್ತ್ರೀಯರು ಸನ್ಯಾಸಿಗಳಂತೆ (austerity) ವೈರಾಗ್ಯನಿಷ್ಠೆಯಿಂದಲೂ ಶಾಸ್ತ್ರನಿಯತವಾದ ಬ್ರಹ್ಮಚರ್ಯೆ ಯಿಂದಲೂ (celibacy) ಶರೀರಯಾತ್ರೆಯನ್ನು ಮಾಡುತ್ತಾ ಜೀವಮಾನ ವನ್ನು ಕಳೆಯುತ್ತಿದ್ದರು. ಶರೀರಸುಖಕ್ಕಾಗಿ ಪುನರ್ವಿವಾಹ ಮಾಡಿಕೊಳ್ಳು ವುದು ಅನೀತಿ, ಅಕೀರ್ತಿಕರವೆಂದೂ, ಕುಲಕ್ಷಯ ಕೃತದೋಷವೆಂದೂ, ರಾಕ್ಷಸಕೃತ್ಯವೆಂದೂ ಅರಿತಿದ್ದರು.

ಇಂದಿನ ಭಾರತ ಸ್ತ್ರೀಯರಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಸಂಪ್ರದಾಯಸ್ಥರಾದ ಕುಲಸ್ತ್ರೀಯರನ್ನು ಕುರಿತು ಹೇಳಿರುವ ಶಾಸ್ತ್ರಸಮ್ಮತವಾದ ಹಿತೋಪದೇಶವನ್ನು ಭಾರತದಲ್ಲಿನ ಚತುರ್ವರ್ಣ ಸ್ತ್ರೀಯರೂ ಗಮನಿಸಬೇಕು.

Role of Women

Appeal by Srimathi Vijayalakshmi Pandit

(Extract from "*The Hindu*")

Stressing the need for increased participation by women in civic activities, Srimati Vijayalakshmi Pandit said

that the first duty of a woman was to look after her home and make that a strong unit from which she should expand her activities to civic life and through it to the wider circle of national affairs.

ಭಾರತದ ವಿದ್ಯಾಶಾಖೆಯು ಚತುರ್ವರ್ಣದ ಕುಲಸ್ತ್ರೀಯರಿಗೆ ಕೊಡುವ ವಿದ್ಯಾಭ್ಯಾಸವು ನೈತಿಕ ದೃಷ್ಟಿಯಿಂದ ಕುಲಸ್ತ್ರೀಯರನ್ನು ಕುಲವನ್ನು ಉದ್ಧಾರಮಾಡುವ ಗೃಹಲಕ್ಷ್ಮಿಯರನ್ನಾಗಿ ಮಾಡುವಂತೆಯೂ, ದೇಶವನ್ನು ಉದ್ಧಾರ ಮಾಡುವ ವಿಜಯಲಕ್ಷ್ಮಿಯರನ್ನಾಗಿ ಮಾಡುವಂತೆಯೂ ಇರಬೇಕು.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಹಿಂದೂ ಗೃಹಗಳಲ್ಲಿ ಅವಿವಾಹಿತ ಯುವತಿಯರ ಸಂಖ್ಯೆ ಅಧಿಕವಾಗುತ್ತಿರಲು ಕಾರಣವೇನು? ಈ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಭಾರತ ಸರ್ಕಾರವು ಏನು ಮಾಡಬೇಕು?

೨. ಹಿಂದೂ ಯುವತಿಯರ ಗೃಹಜೀವನದ ನೈತಿಕ ಮಟ್ಟವನ್ನು ಹಿಂದಿನ ಕಾಲದ ಅರುಂಧತಿ, ಅನಸೂಯೆ, ಸಾವಿತ್ರಿ, ಇತ್ಯಾದಿ ಶ್ರುತಿಪ್ರಸಿದ್ಧರಾದ ಸ್ತ್ರೀಯರ ಗೃಹಜೀವನದ ಮಟ್ಟಕ್ಕೆ ತರಲು ಭಾರತ ಸರ್ಕಾರವೂ ಹಿಂದೂ ಸಮಾಜವೂ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು?

೧೭. ಹರಿಜನರ ಉದ್ಧಾರ– ಹರಿಜನರ ಕರ್ತವ್ಯ

Harijan Uplift and Harijans' Duty

ಹರಿಜನರು ಚತುರ್ವರ್ಣ ಗೃಹಸ್ಥ ಗೃಹಿಣಿಯರ ಅಧರ್ಮ ಅನೀತಿ ಅಕೀರ್ತಿ ವರ್ತನೆಗಳಿಂದ ಜನಿಸಿದ ವರ್ಣಸಂಕರದ ಹಿಂದುಗಳು. ಹರಿಜನರ ಪೂರ್ವಿಕರಿಗೆ ಅವರ ಅನೀತಿ ಅಧರ್ಮ ಅಕೀರ್ತಿ ವರ್ತನೆಗಳಿಗೆ ನೈತಿಕ ಹಿಂದೂ ಸಮಾಜದಲ್ಲಿದ್ದ ಬಹಿಷ್ಕಾರವೂ, ಅಸ್ಪೃಶ್ಯತೆಯೂ ಅವರ ಸಂತತಿಯನ್ನು ಹಿಂಬಾಲಿಸಿ ಬಂದಿರುತ್ತದೆ. ಈ ಮೂಲ ತತ್ವವನ್ನು ಚತುರ್ವರ್ಣ ದೇಹಸ್ಥರಾದ ಹಿಂದುಗಳೂ ಹರಿಜನರೂ ಗ್ರಹಿಸುವುದರಿಂದ ಹರಿಜನರ ಉದ್ಧಾರ ಕ್ರಮವು ಇಂದಿನ ಹಿಂದೂಸಮಾಜದಲ್ಲಿ ಯಾವ ಕ್ರಮದಿಂದ ಕೈಗೊಳ್ಳಬೇಕೆಂಬುದನ್ನು ಅವರು ನಿಶ್ಚಯಿಸಬಹುದು. ಹಿಂದೂದೇಶವನ್ನು ವಶಪಡಿಸಿಕೊಂಡಿದ್ದ ಬ್ರಿಟಿಷರು ಅಧಿಕ ಸಂಖ್ಯಾತರಾದ

ಹರಿಜನರಿಗೂ ಚತುರ್ವರ್ಣದ ಹಿಂದುಗಳಿಗೂ ಅಪಪ್ರಚಾರದಿಂದ ವೈಷಮ್ಯವನ್ನುಂಟುಮಾಡಲು ಹರಿಜನರಿಗೆ ತುಳಿಯಲ್ಪಟ್ಟ ಜನಾಂಗ (Depressed classes) ಎಂದು ಹೆಸರನ್ನು ಇಟ್ಟಿದ್ದರು. ಬ್ರಿಟಿಷರ ಅಪಪ್ರಚಾರದ ಧ್ಯೇಯವು ಹರಿಜನರನ್ನು ಕ್ರೈಸ್ತಮತ ಅವಲಂಬಿಗಳನ್ನಾಗಿ ಮಾಡುವುದು ಆಗಿತ್ತೇ ವಿನಹ ಪುನೀತರನ್ನಾಗಿ ಮಾಡುವ ಧ್ಯೇಯವು ಅವರಿಗೆ ಇರಲಿಲ್ಲ.

ಹರಿಜನರ ಉದ್ಧಾರ ಎಂದರೆ ಹರಿಜನರನ್ನು ಪುನೀತರನ್ನಾಗಿ ಮಾಡಿ ಸಮಾಜದಲ್ಲಿನ ಬಹಿಷ್ಕಾರವೂ ಅಸ್ಪೃಶ್ಯತೆಯೂ ನಿವಾರಣೆಯಾಗುವಂತೆ ಮಾಡುವ ಸುಧಾರಣೆಗಳು ಎಂಬುದನ್ನು ಗ್ರಹಿಸಬೇಕು. ಚತುರ್ವರ್ಣ ಧರ್ಮನಿಷ್ಠರ ಕುಲ–ಜಾತಿ ಧರ್ಮಗಳೂ ಭರತಖಂಡದಲ್ಲಿ ಶಾಶ್ವತವಾಗಿ ನಶಿಸುವಂತೆ ಹಿಂದೂ ಸಮಾಜದ ನೈತಿಕ ಪದ್ಧತಿಗಳನ್ನು ತಿದ್ದುಪಡಿ ಮಾಡುವುದರಿಂದ ಹರಿಜನರನ್ನು ಪುನೀತರನ್ನಾಗಿಯೂ ನೀತಿವಂತರನ್ನಾಗಿಯೂ ಮಾಡಿ ಉದ್ಧಾರಮಾಡಿದಂತೆ ಆಗುವುದಿಲ್ಲ. ಪುನೀತರಾದ ಚತುರ್ವರ್ಣದವರನ್ನು ಹರಿಜನರಂತೆ ಮಾಡಿದಂತೆ ಆಗುತ್ತದೆ.

ಹಿಂದೂ ಸಮಾಜದ ನೈತಿಕ ಉನ್ನತಿ

ಹಿಂದೂ ಸಮಾಜದ ನೈತಿಕ ಹಿತದೃಷ್ಟಿಯಿಂದ ಗೀತಾ ಪ್ರಸಿದ್ಧರಾದ ಭೀಷ್ಮ ದ್ರೋಣರು ಅವರ ಅನೀತಿ ಅಕೀರ್ತಿ ವರ್ತನೆಗಾಗಿ ಕೃಷ್ಣಾರ್ಜುನರಿಂದ ವಧಿಸಲ್ಪಟ್ಟರು. ಶ್ರೀರಾಮನು ಸೀತಾದೇವಿಯ ಪವಿತ್ರತೆಯನ್ನು ಅಗ್ನಿಪರೀಕ್ಷೆಯಿಂದ ಅರಿತಿದ್ದರೂ ರಾಷ್ಟ್ರದಲ್ಲಿನ ಇತರ ಜನರಿಗೆ ಬುದ್ಧಿ ಭೇದವಾಗದಂತೆ ಗರ್ಭಿಣಿಯಾಗಿದ್ದ ಆಕೆಯನ್ನು ಅಡವಿಗೆ ಕಳುಹಿಸಿದ್ದೂ ಹಿಂದೂ ಸಮಾಜದ ನೈತಿಕ ಹಿತದೃಷ್ಟಿಯಿಂದಲೇ. ಆದುದರಿಂದ ವ್ಯಕ್ತಿಗಳ ಅನೀತಿ ಅಕೀರ್ತಿ ವರ್ತನೆಗಳಿಗಾಗಿ ಏರ್ಪಟ್ಟ ಸಮಾಜದ ಬಹಿಷ್ಕಾರ ಅಸ್ಪೃಶ್ಯತಾ ಪದ್ಧತಿಗಳು ಸಾಮಾಜಿಕ ನೈತಿಕ ಮಟ್ಟವನ್ನು ರಕ್ಷಿಸಲು ಪೂರ್ವೀಕರು ಆಚರಿಸುತ್ತಿದ್ದ ಶ್ರೇಯಸ್ಕರವಾದ ಉತ್ತಮ ತರಗತಿಯ ಶಿಕ್ಷಣ ಪದ್ಧತಿಗಳು ಎಂಬುದನ್ನು ಭಾರತೀಯರು ಅರಿಯಬೇಕು. ಲೋಕಸಂಗ್ರಹಕ್ಕಾಗಿ ಏರ್ಪಟ್ಟಿರುವ ನಿಗ್ರಹ ಪದ್ಧತಿಗಳನ್ನು ಅನಾಗರೀಕ ಪದ್ಧತಿಗಳೆಂದು ತ್ಯಜಿಸಬಾರದು.

ಹರಿಜನರ ಕರ್ತವ್ಯ

ಹರಿಜನರಿಗೆ ಇರುವ ಸಮಾಜದ ಬಹಿಷ್ಕಾರವೂ, ಅಸ್ಪೃಶ್ಯತೆಯೂ ದೀರ್ಘಕಾಲದಿಂದ ನಿವಾರಣೆ ಆಗದೆ ಹಿಂಬಾಲಿಸಿಕೊಂಡು ಬಂದಿರುವುದಕ್ಕೆ ಕಾರಣವನ್ನು ಅವರು ಅರಿತಿರುವುದಿಲ್ಲ. ಅವರು ತಮ್ಮನ್ನು ಪುನೀತ ರನ್ನಾಗಿ ಮಾಡಿಕೊಳ್ಳಲು ಪ್ರಾಯಶ್ಚಿತ್ತ ಕರ್ಮಗಳನ್ನು ಮಾಡದೆ ಶಾಸ್ತ್ರ ನಿಷಿದ್ಧ ಆಹಾರ ವ್ಯವಹಾರಗಳನ್ನು ತ್ಯಜಿಸಿ ಕಾಮ ಕ್ರೋಧ ಲೋಭ ಅಜ್ಞಾನರೂಪದ ವೈರಿಗಳ ನಿಗ್ರಹಸಾಮರ್ಥ್ಯವನ್ನು ವೃದ್ಧಿಮಾಡಿಕೊಳ್ಳದೆ ಅವರ ಪೂರ್ವೀಕರಂತೆಯೇ ಹೃದಯ ದೌರ್ಬಲ್ಯದಿಂದ ವರ್ತಿಸುತ್ತಿರುವುದೇ ಮುಖ್ಯ ಕಾರಣವೆಂಬುದನ್ನು ಅವರು ಅರಿಯಬೇಕು. ಹರಿಜನರ ಅಸ್ಪೃಶ್ಯತಾ ನಿವಾರಣ ಕಾರ್ಯವೂ, ಪ್ರಾಯಶ್ಚಿತ್ತವೂ, ಅವರ ಶರೀರಗಳಿಂದಲೂ, ಹೃದಯಗಳಿಂದಲೂ ಪ್ರಾರಂಭವಾಗಬೇಕಾಗಿರುವುದರಿಂದ ಅವರು ಅವರ ಶರೀರವನ್ನು ದೇವಾಲಯದಂತೆ ನಿರ್ಮಲವಾಗಿಯೂ, ಹೃದಯವನ್ನು ಗರ್ಭಗುಡಿಯಂತೆ ಪವಿತ್ರವಾಗಿ ಇಡಲು ಪ್ರಯತ್ನಪೂರ್ವಕವಾದ ಅಭ್ಯಾಸ ವನ್ನು ಮಾಡಬೇಕು. ಶಾಸ್ತ್ರನಿಷಿದ್ಧ ಭೋಗಗಳಿಗಾಗಿ ಶಾಸ್ತ್ರನಿಷಿದ್ಧ ಕರ್ಮಗಳನ್ನು ಮಾಡದೆ ಶಾಸ್ತ್ರನಿಷಿದ್ಧ ಆಹಾರ ವ್ಯವಹಾರಗಳನ್ನು ತ್ಯಜಿಸುವ ಅಭ್ಯಾಸವನ್ನು ಮಾಡಬೇಕು. ಅದರಿಂದ ಅವರ ಶರೀರ ಮನ ಬುದ್ಧಿಗಳಲ್ಲಿನ ಅಸುರ ಸಂಸ್ಕಾರಗಳ ಸಾಮರ್ಥ್ಯವು ಕ್ರಮೇಣ ನಶಿಸಿ ಅಂತ್ಯದಲ್ಲಿ ಅಸುರ ಸಂಸ್ಕಾರಗಳೇ ವಿನಾಶವನ್ನು ಹೊಂದುತ್ತವೆ. ಶಾಸ್ತ್ರ ನಿಯತ ಆಹಾರ ವ್ಯವಹಾರಗಳನ್ನು ತೀವ್ರ ನಿಷ್ಠೆಯಿಂದ ಅಭ್ಯಾಸಮಾಡು ವುದರಿಂದ ಅವರಲ್ಲಿ ದೈವೀಸಂಸ್ಕಾರಗಳ ಸಾಮರ್ಥ್ಯವೇ ವೃದ್ಧಿಹೊಂದಿ ಅಸುರಸ್ವಭಾವದಿಂದ ಇದ್ದವರು ದೈವೀಸಂಸ್ಕಾರದ ನರಶ್ರೇಷ್ಠರೇ ಆಗುತ್ತಾರೆ.

ಅಸುರಭಾವಗಳು – ಪ್ರಾಯಶ್ಚಿತ್ತ ಕರ್ಮಗಳು

ಅಸುರ ಸ್ವಭಾವಗಳು ಅನಂತಕೋಟಿ ಇರುತ್ತವೆಯಲ್ಲಾ, ಅವುಗಳ ನ್ನೆಲ್ಲಾ ತ್ಯಜಿಸಲು ಹೇಗೆ ಸಾಧ್ಯ ಎಂದರೆ ಅಸುರ ಸ್ವಭಾವಗಳಿಗೆಲ್ಲಾ ಮೂಲಭೂತವಾಗಿರುವ ಕಾಮ, ಕ್ರೋಧ, ಲೋಭಗಳೆಂಬ ಅಸುರ

ಸ್ವಭಾವಗಳನ್ನು ತ್ಯಜಿಸಿದರೆ ಅನಂತಕೋಟಿ ಅಸುರ ಸ್ವಭಾವಗಳನ್ನೂ ತ್ಯಜಿಸಿದಂತಾಗುತ್ತದೆ. ಆದುದರಿಂದ ಕಾಮ ಕ್ರೋಧ ಲೋಭ ಹೃದಯದಲ್ಲಿ ಉದ್ಭವವಾಗುವ ಕಾಲದಲ್ಲಿ ಅವುಗಳು ಕಾರ್ಯಕಾರಿಯಾಗದಂತೆ ತಡೆಗಟ್ಟುವುದನ್ನು ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಬೇಕು. ಅವುಗಳು ಉದ್ಭವವಾಗದೆ ಅಡಗಿರುವ ಕಾಲದಲ್ಲಿ ಹೃದ್ದೇಶಸ್ಥನಾದ ಈಶ್ವರನನ್ನು ಮಾನಸಿಕ ವಾಙ್ಮಯ ಶಾರೀರಿಕ ತಪಸ್ಸುಗಳಿಂದ ಅರ್ಚಿಸಿ ಶರೀರವನ್ನು ದೇವಾಲಯದಂತೆಯೂ, ಹೃದ್ದೇಶವನ್ನು ಗರ್ಭಗುಡಿಯಂತೆಯೂ ಪರಿಶುದ್ಧವನ್ನಾಗಿಡಲು ಪ್ರಯತ್ನಪೂರ್ವಕವಾದ ಅಭ್ಯಾಸವನ್ನು ಮಾಡಬೇಕು. ಪರಿಚರ್ಯಾತ್ಮಕ ನಿಷ್ಠೆಯಿಂದ ಮಾನವರನ್ನೂ, ಗೋವುಗಳನ್ನೂ ಈಶ್ವರನ ಸೇವೆಯೆಂದು ಅರಿತು ಸೇವೆಮಾಡುವುದನ್ನು ಅಭ್ಯಾಸಮಾಡಬೇಕು. ಪತಿತರನ್ನು ಪಾವನರನ್ನಾಗಿ ಮಾಡುವ ಈ ಕರ್ಮಗಳಿಗೆ ಪ್ರಾಯಶ್ಚಿತ್ತ ಕರ್ಮಗಳೆಂದು ಹೆಸರು.

ವಾಲ್ಮೀಕಿ, ಅಹಲ್ಯೆ, ಭೀಷ್ಮ

ಸ್ವಧರ್ಮಭ್ರಷ್ಟನಾಗಿ ಅಸ್ಪೃಶ್ಯನಂತೆ ಜೀವಿಸುತ್ತಿದ್ದ ವಾಲ್ಮೀಕಿಯೂ, ಇಂದ್ರನ ಮೋಸಕೃತ್ಯದಿಂದ ಪತಿವ್ರತಭ್ರಷ್ಟಳಾಗಿದ್ದ ಗೌತಮ ಋಷಿಪತ್ನಿಯಾದ ಅಹಲ್ಯೆಯೂ, ರಾಮತಾರಕಮಂತ್ರ ಅನುಷ್ಠಾನದಿಂದ ಪುನೀತರಾಗಿ ಲೋಕಪ್ರಸಿದ್ಧರಾದ ಮಹರ್ಷಿಯೂ ಪತಿವ್ರತಾಶಿರೋಮಣಿಯೂ ಆದಂತೆ ಹರಿಜನರೂ ಪ್ರಾಯಶ್ಚಿತ್ತ ಕರ್ಮಗಳ ಅನುಷ್ಠಾನದಿಂದ ಸಂಶುದ್ಧ ಕಿಲ್ಬಿಷರಾಗಿ ತಮ್ಮ ಜೀವಿತ ಕಾಲದಲ್ಲಿಯೇ ಪುನೀತರಾಗಬಹುದು. ಅಧರ್ಮ ಅನೀತಿ ಅಕೀರ್ತಿ ವರ್ತನೆಗಾಗಿ ಭೀಷ್ಮನು ಲೋಕಸಂಗ್ರಹ ದೃಷ್ಟಿಯಿಂದ ಕೃಷ್ಣಾರ್ಜುನರಿಂದ ಯುದ್ಧದಲ್ಲಿ ವಧಿಸಲ್ಪಟ್ಟರೂ, ವಧಿಸಲ್ಪಟ್ಟ ಮಾರ್ಗಶೀರ್ಷ ಬಹುಳ ಪಂಚಮೀ ದಿನದಿಂದ ಮಾಘ ಶುದ್ಧ ರಥಸಪ್ತಮೀ ತನಕ ೪೭ ದಿನ ಶರಪಂಜರದ ಮೇಲೆ ಮಲಗಿದ್ದು ಶ್ರೀಕೃಷ್ಣನನ್ನೇ ಸರ್ವವ್ಯಾಪಕನಾದ ವಿಷ್ಣುವೆಂದು ಹೃದಯದಲ್ಲಿ ಧ್ಯಾನಮಾಡುತ್ತಾ ಮರಣವನ್ನು ಹೊಂದಿ ಮೋಕ್ಷವನ್ನು ಪಡೆದು ಲೋಕಪ್ರಸಿದ್ಧನಾಗಿರುತ್ತಾನೆ. ಅಹಲ್ಯೆಯ ಅಸ್ಪೃಶ್ಯತೆಯು ರಾಮತಾರಕ ಮಂತ್ರದ ಭಜನೆಯಿಂದ ನಿವಾರಣೆ

ಯಾದುದರಿಂದ ಶ್ರೀರಾಮನಿಗೆ ಶ್ರೀರಾಮ ಅಷ್ಟೋತ್ತರ ನಾಮಾವಳಿಯಲ್ಲಿ "ಅಹಲ್ಯಾಪಾವನಾಯನಮಃ" ಎಂಬ ಒಂದು ಪ್ರಸಿದ್ಧವಾದ ನಾಮ ಇದೆ. ಭೀಷ್ಮನ ಕುಲಕ್ಷಯಕೃತದೋಷವು ಶ್ರೀಕೃಷ್ಣನ ಧ್ಯಾನದಿಂದ ನಿವಾರಣೆ ಆದುದರಿಂದ ಶ್ರೀಕೃಷ್ಣನಿಗೆ ಶ್ರೀಕೃಷ್ಣಾಷ್ಟೋತ್ತರ ನಾಮಾವಳಿಯಲ್ಲಿ "ಭೀಷ್ಮಮುಕ್ತಿಪ್ರದಾಯಕ" ಎಂಬ ನಾಮ ಇದೆ.

ಹರಿಜನರ ಉದ್ಧಾರ ಕ್ರಮವು ಪ್ರಥಮತಃ ಅವರ ಹೃದಯ ನೈರ್ಮಲ್ಯದಿಂದ, ನೀತಿಯುತವಾದ ಧರ್ಮ ಅವಿರುದ್ಧವಾದ ಶರೀರಯಾತ್ರೆ ಯಿಂದ ಪ್ರಾರಂಭಿಸಿ ಅವರು ವಾಸಿಸುವ ಕುಟೀರಗಳನ್ನು ಋಷಿಗಳ ಆಶ್ರಮ ಗಳಂತೆ ಪರಿವರ್ತಿಸುವಂತೆ ಮಾಡಬೇಕು. ಅನಂತರ ಹರಿಜನರ ಹೃದಯ ನೈರ್ಮಲ್ಯವೂ, ಧರ್ಮನೀತಿಯುತ ಜೀವನವೂ ಅವರ ವಿದ್ಯಾಮಂದಿರ ಗಳನ್ನೂ ಭಜನಮಂದಿರಗಳನ್ನೂ ಅವರ ಸಮಾಜವನ್ನೂ ಪರಡುವಂತೆ ಮಾಡಬೇಕು. ಹರಿಜನರ ಉದ್ಧಾರಕ್ಕಾಗಿ ಕೈಗೊಳ್ಳುವ ನೈತಿಕ, ಸಾಮಾಜಿಕ ಸುಧಾರಣೆಗಳು ಅಪವಿತ್ರರನ್ನು ಪವಿತ್ರರನ್ನಾಗಿ ಮಾಡುವ ಯೋಜನೆಗಳಾಗಿರಬೇಕೇ ಹೊರತು ಪವಿತ್ರರನ್ನು ಅಪವಿತ್ರರನ್ನಾಗಿ ಮಾಡುವಂತೆ ಇರಬಾರದು. ಹರಿಜನರು ನಂದನಾರ್, ಕನಕ, ಅಹಲ್ಯೆ, ವಾಲ್ಮೀಕಿಯರಂತೆ ಧರ್ಮಾತ್ಮರಾಗಿ, ಪವಿತ್ರರಾಗಿ ಪರಿವರ್ತಿಸುವುದಕ್ಕೆ ಮುಂಚೆಯೇ ದೇವಾಲಯಗಳ ಗರ್ಭಗುಡಿ ಪ್ರವೇಶ, ಚಾತುರ್ವರ್ಣದವರ ಯಾಗಮಂಟಪ ವಿವಾಹಮಂಟಪಗಳ ಪ್ರವೇಶ, ಭೋಜನಕೂಟಗಳ ಪ್ರವೇಶ ಇತ್ಯಾದಿಗಳಿಂದ ಪ್ರಾರಂಭಮಾಡುವ ಯೋಜನೆಗಳು ಅಪಸವ್ಯದ ಯೋಜನೆಗಳು ಆಗಿರುತ್ತವೆ. ಈ ರೀತಿಯ ಅಪಸವ್ಯದ ಯೋಜನೆಗಳನ್ನು ಲೋಕಸಂಗ್ರಹದ ಯೋಜನೆಗಳೆಂದು ಮೋಹಿಸಬಾರದು. ಭಾರತ ಸರ್ಕಾರವು ಹರಿಜನರ ನೈತಿಕ ಜೀವನವನ್ನು ಉತ್ತಮಗೊಳಿಸಲು ಅಧಿಕ ವಾದ ಗಮನವನ್ನು ಕೊಡಬೇಕು.

ಈ ಪ್ರಶ್ನೆಗಳಿಗೆ ಉತ್ತರ ಹೇಳಿ

೧. ಹಿಂದೂ ಸಮಾಜದಲ್ಲಿ ಬಹಿಷ್ಕಾರ, ಅಸ್ಪೃಶ್ಯತಾಪದ್ಧತಿಗಳ ಆಚರಣೆಯ ಆವಶ್ಯಕತೆ ಏನು?

೨. ಹರಿಜನರ ಉದ್ಧಾರ ಕ್ರಮವು ಯಾವ ರೀತಿ ಪ್ರಾರಂಭವಾಗಬೇಕು?

೧೮. ಜಗತ್ತಿನಲ್ಲಿ ಭಯ, ಅಶಾಂತಿ, ಅಜ್ಞಾನಗಳ ನಿವಾರಣೆ

World Peace and World Citizenship

ಮಾನವನಿಗೆ ಧರ್ಮನೀತಿ ಕೀರ್ತಿಯುತ ಶರೀರ ಯಾತ್ರೆಯು ಮಾನವನ ದೇಹವನ್ನೂ ಹೃದ್ದೇಶವನ್ನೂ ನಿರ್ಮಲವಾಗಿಯೂ ಪವಿತ್ರವಾಗಿಯೂ ಇಡಲು ಅವಶ್ಯಕವಾಗಿದ್ದರೂ, ಮಾನವನ ಹೃದ್ದೇಶದಲ್ಲಿ ಉದ್ಭವವಾಗುವ ಭಯ ಅಶಾಂತಿ ಅಜ್ಞಾನಗಳನ್ನು ನಿರ್ಮೂಲಮಾಡಲು ಅವುಗಳಿಗೆ ಸಾಮರ್ಥ್ಯವಿರುವುದಿಲ್ಲ. ಆದುದರಿಂದ ದೇಹದ ನಿರ್ಮಲತೆಯನ್ನೂ, ಹೃದಯದ ಪವಿತ್ರತೆಯನ್ನೂ ಪಡೆದ ಮಾನವನ ಹೃದಯದಲ್ಲಿ ಉದ್ಭವವಾಗುವ ಭಯ ಅಶಾಂತಿಗಳನ್ನು ನಾಶಮಾಡಲು ಮಾನವನ ಹೃದ್ದೇಶಸ್ಥನಾದ ಜೀವಬ್ರಹ್ಮರ ಗುಹ್ಯಾದ್ಗುಹ್ಯತಮವಾದ ರಹಸ್ಯವನ್ನೂ, ಜಗತ್ತಿನಲ್ಲಿನ ಜೀವ ಜೀವರ ಸಂಬಂಧವನ್ನೂ ಪ್ರಯತ್ನಪೂರ್ವಕವಾಗಿ ಅರಿಯಬೇಕು. ಜಗತ್ತಿನಲ್ಲಿನ ಅನೇಕ ಮತಗಳು ಅನೇಕ ಭಾಷೆಗಳಲ್ಲಿ "ದೇವರು ಒಬ್ಬನೇ, ಆತನು ತಂದೆಯಂತೆ ಇರುವ ಯಜಮಾನನು, ಜಗತ್ತಿನಲ್ಲಿನ ಮಾನವ ದೇಹಗಳಲ್ಲಿನ ಜೀವರುಗಳೆಲ್ಲಾ ಆತನ ಮಕ್ಕಳು, ಸಮಾನರಾದ ಸಹೋದರರು" ಎಂದು ಮಾನವರ ಸಹೋದರರ ಸಮದರ್ಶನದ ಅನುಷ್ಠಾನವನ್ನು (Universal brotherhood) ಬೋಧಿಸುತ್ತವೆ. ಆದರೆ ಹಿಂದೂ ಶಾಸ್ತ್ರಜ್ಞರು ಜೀವರನ್ನು ಅಸಮರೂಪದ ವ್ಯಕ್ತಿಗಳೆಂದೂ ಸಮರೂಪದ ಅನೇಕ ವ್ಯಕ್ತಿಗಳೆಂದೂ ಅನೇಕ ವಿಭಕ್ತಿಗಳಿಂದ (Division) ದರ್ಶಿಸುತ್ತಿರುವುದೇ ಮಾನವರ ಹೃದಯದಲ್ಲಿನ ಭಯ ಅಶಾಂತಿಗಳ ಉದ್ಭವಕ್ಕೆ ಮುಖ್ಯ ಕಾರಣವೆಂದೂ, ಈ ರೀತಿಯ ವಿಭಕ್ತಿಪೂರ್ವಕವಾದ ದರ್ಶನಗಳನ್ನು ಮೋಹದರ್ಶನವೆಂದೂ ಬೋಧಿಸುತ್ತಾ, ಜೀವ ಜೀವರಿಗೆ ಇರುವ ಜೀವ ಈಶ್ವರರಿಗೆ ಇರುವ ಅವಿಭಕ್ತವಾದ ಏಕತ್ವದ ರಹಸ್ಯವನ್ನು ಅರಿತು ಅವಿಭಕ್ತವಾದ ಏಕತ್ವ ದರ್ಶನವನ್ನು ಪ್ರಯತ್ನಪೂರ್ವಕ ಅಭ್ಯಾಸಮಾಡುವುದೇ ಮಾನವನ ಹೃದ್ದೇಶದಲ್ಲಿನ ಭಯ ಅಶಾಂತಿ ಅಜ್ಞಾನಗಳನ್ನು ನಿರ್ಮೂಲಮಾಡಲು ಮುಖ್ಯವಾದ ಸಾಧನವೆಂದೂ ಬೋಧಿಸುತ್ತಾರೆ. ಜಗದ್ರೂಪನಾದ ಸರ್ವಗತ ಬ್ರಹ್ಮನು ಮಾನವನ ಹೃದ್ದೇಶಸ್ಥನಾಗಿರುವ ರಹಸ್ಯವನ್ನು ಬೋಧಿಸಿ ಮಾನವನ

ಹೃದ್ದೇಶದಲ್ಲಿ ಜೀವ ಈಶ್ವರರೆಂದು ಇಬ್ಬರು ಪುರುಷರು ಇರುವುದಿಲ್ಲವೆಂದೂ ಹೃದ್ದೇಶಸ್ಥನಾದ ಅವಿಭಕ್ತನಾದ ಏಕನಾದ ಈಶ್ವರನನ್ನೇ ಮೋಹದಿಂದ ಅಲ್ಪನಾದ ಜೀವನೆಂದು ದರ್ಶಿಸುತ್ತಿದ್ದೇವೆ ಎಂದೂ ಬೋಧಿಸುತ್ತಾರೆ. ನಾವು ದರ್ಶಿಸುತ್ತಿರುವ ಅನೇಕ ಜೀವರನ್ನೇ ಅವಿಭಕ್ತನಾದ ಏಕನಾದ ಹೃದ್ದೇಶಸ್ಥನಾದ ಈಶ್ವರನೆಂದು ದರ್ಶಿಸಬೇಕೆಂಬುದೇ ಹಿಂದೂಶಾಸ್ತ್ರಜ್ಞರ ಉತ್ತಮವಾದ ರಹಸ್ಯವಾದ ಉಪದೇಶ. ಈ ದರ್ಶನವೇ ಮಾನವರ ಹೃದ್ದೇಶಸ್ಥವಾದ ಭಯ ಅಶಾಂತಿ ಅಜ್ಞಾನಗಳ ನಿವಾರಣೆಗೆ ಸಾಧನ.

ಶೃತಿಪ್ರಸಿದ್ಧರಾದ ಶ್ರೇಷ್ಠತಮ ವೈಜ್ಞಾನಿಕರು

World Citizens

ಶೃತಿಪ್ರಸಿದ್ಧನಾದ ಮನುಷ್ಯದೇಹದ ಉದ್ದಾಲಕನು ನರಶ್ರೇಷ್ಠನಾದ ತನ್ನ ಮಗನಾದ ಶ್ವೇತಕೇತುವಿಗೆ ಅಸಮವಿಭಕ್ತಿ ರೂಪದ ಜೀವ ಈಶ್ವರ ರನ್ನೂ ಸಮವಿಭಕ್ತಿಗಳಾದ ಜೀವಜೀವರ ಸಹೋದರ ಭಾವವನ್ನೂ (Universal brotherhood) ಬೋಧಿಸಿರುವುದಿಲ್ಲ. ಧೀಮಂತ ವೈಜ್ಞಾನಿಕ ನಾದ ಉದ್ದಾಲಕನು "ಅಹಂ ಬ್ರಹ್ಮ ಅಸ್ಮಿ" ನಾನೇ ಸರ್ವಗತ ಪರಬ್ರಹ್ಮ ನಾಗಿರುತ್ತೇನೆ ಎಂದು ತನ್ನ ಯಥಾರ್ಥವಾದ ಪರಬ್ರಹ್ಮ ಸ್ವರೂಪವನ್ನು ಉಪದೇಶಿಸಿ ತನ್ನ ಮಗನಾದ ಶ್ವೇತಕೇತುವಿಗೆ "ತತ್ವಮಸಿ" ಆ ಸರ್ವಗತ ಪರಬ್ರಹ್ಮನೇ ನೀನು ಆಗಿರುತ್ತಿ ಎಂದು ಅವಿಭಕ್ತವಾದ ಏಕತ್ವದರ್ಶನದ ರಹಸ್ಯವನ್ನೂ (Undivided oneness) ಜಗತ್ತಿನಲ್ಲಿನ ಸರ್ವಜೀವರೂ ಮಹಾಕಾಶ ಘಟಾಕಾಶವತ್ ಅವಿಭಕ್ತವಾದ ಏಕಸ್ವರೂಪದ ಸರ್ವಗತ ಬ್ರಹ್ಮನಾಗಿರುವ ರಹಸ್ಯವನ್ನು ಬೋಧಿಸಿರುತ್ತಾನೆ. ಇದೇ ರಹಸ್ಯವನ್ನೇ ಮನುಷ್ಯ ದೇಹದ ಪರಬ್ರಹ್ಮನಾದ ಶ್ರೀಕೃಷ್ಣನು ತ್ರೇತಾಯುಗದಲ್ಲಿ ವಿವಸ್ವರಾಜನಿಗೂ ದ್ವಾಪರಯುಗದಲ್ಲಿ ಸಖನಾದ ಅರ್ಜುನನಿಗೂ ಉಪದೇಶಿಸಿರುತ್ತಾನೆ. ಈ ರೀತಿ ಅವಿಭಕ್ತವಾದ ಏಕತ್ವದ ಪರಬ್ರಹ್ಮ ದರ್ಶನವಿರುವ ವಿಜ್ಞಾನಪುರುಷರು ಯಾರು ಯಾರಿಗೆ ಈ ಜಗತ್ತಿನಲ್ಲಿ ಭಯಪಡಬೇಕು? ಯಾರು ಯಾರನ್ನು ದ್ವೇಷಿಸಬೇಕು? ಯಾರು ಯಾರ ಸಂಗಡ ಯುದ್ಧಮಾಡಬೇಕು? ಯಾರು ಯಾರನ್ನು ಕೊಲ್ಲಬೇಕು?

ಶ್ರೀಕೃಷ್ಣ—ಪಶ್ಯಮೇಪಾರ್ಥ ರೂಪಾಣಿ ಶತಶೋಥ ಸಹಸ್ರಶಃ [ವಿಶ್ವರೂಪ]
ಇಹೈಕಸ್ಥಂ ಜಗತ್ಕೃತ್ಸ್ನಂ ಪಶ್ಯಾದ್ಯಸಚರಾಚರಮ್ [Oneness]
ಗೀತ—ವೇದಾಽವಿನಾಶಿನಂ ನಿತ್ಯಂ [ಯ] ಏನಮಜಮವ್ಯಯಂ । [Oneness]
ಕಥಂ [ಸಪುರುಷಃ] ಪಾರ್ಥ ಕಂಘಾತಯತಿ ಹಂತಿಕಂ ॥
ಗೀತ—ಅಚ್ಛೇದ್ಯೋಽಯ ಮದಾಹ್ಯೋಽಯ ಮಕ್ಲೇದ್ಯೋಽ ಅಶೋಷ್ಯ ಏವಚ
ನಿತ್ಯಸ್ಸರ್ವಗತಸ್ಥಾಣುರಚಲೋಽಯಂ ಸನಾತನಃ [ಪುರುಷರ್ಷಭ]

ನಾನು ಸರ್ವಗತ ಬ್ರಹ್ಮನಾಗಿರುತ್ತೇನೆ ಎಂಬ ದರ್ಶನದ ವೈಜ್ಞಾನಿಕರು ಅನಂತವೀರ್ಯವಂತರೂ, ಅಮಿತ ವಿಕ್ರಮಶಾಲಿಗಳೂ, ಭಯ ವ್ಯಥೆಗಳಿಲ್ಲದ ಪುರುಷರ್ಷಭರೂ (World citizens) ಆಗಿರುತ್ತಾರೆ. ಕ್ಷತ್ರಿಯ ರಾಜನಾದ ವಿಶ್ವಾಮಿತ್ರನು ತನ್ನ ಅನೇಕ ಸೈನ್ಯಗಳೊಡನೆ ಏಕಾಂಗಿಯಾದ ಮನುಷ್ಯದೇಹದ ಪರಬ್ರಹ್ಮನಾದ ವಸಿಷ್ಠನೊಡನೆ (World citizen) ಯುದ್ಧಮಾಡಿ ಪರಾಜಿತನಾಗಿ ಬ್ರಹ್ಮಬಲವೇ ವೀರ್ಯವತ್ತಾದ ಬಲವೆಂದೂ ಕ್ಷತ್ರಿಯರ ಬಲವು ಬ್ರಹ್ಮ ಬಲದ ಮುಂದೆ ನಿರ್ವೀರ್ಯವಾದುದೆಂದೂ ಅರಿತು ತೀವ್ರನಿಷ್ಠೆಯಿಂದ ಗಾಯತ್ರೀ ಮಂತ್ರ ಧ್ಯಾನದಲ್ಲಿ ನಿರತನಾಗಿ ವಸಿಷ್ಠನಂತೆಯೇ ಪುರುಷರ್ಷಭನಾದ (World citizen) ಬ್ರಹ್ಮರ್ಷಿಯಾದುದು ಶೃತಿಪ್ರಸಿದ್ಧವಾದ ವಿಷಯವಾಗಿರುತ್ತದೆ. ಬ್ರಹ್ಮರ್ಷಿಗಳಾದ ವಸಿಷ್ಠ ವಿಶ್ವಾಮಿತ್ರರ ಆದರ್ಶದಿಂದ ಪೂರ್ವಸಂಪ್ರದಾಯನಿಷ್ಠರಾದ ಚಾತುರ್ವರ್ಣ ಧರ್ಮನಿಷ್ಠರು, ಅನಂತವೀರ್ಯವಂತರೂ, ಅಮಿತ ವಿಕ್ರಮಶಾಲಿಗಳೂ ಪುರುಷರ್ಷಭರೂ ಆಗಲು ಗಾಯತ್ರೀಮಂತ್ರ ಅನುಷ್ಠಾನವನ್ನು ಮಾಡುತ್ತಾ ಶರೀರಯಾತ್ರೆಯನ್ನು ಮಾಡುತ್ತಾರೆ. ಹೃದ್ದೇಶಸ್ಥನಾಗಿ ಬುದ್ಧಿಯ ಪ್ರವೃತ್ತಿಗಳಿಗೆ ಕಾರಣನಾದ ಜೀವನು ಯಾರೋ ಅವನನ್ನೇ (i) ಲೋಕತ್ರಯ ವ್ಯಾಪಕನಾದ ಸರ್ವವನ್ನೂ ಪ್ರಕಾಶಿಸುವ ಓಂ ಎಂಬ ಏಕನಾದ ಅಕ್ಷರ ಬ್ರಹ್ಮನೆಂದೂ, (ii) ಆತನು ಜ್ಞಾನ—ಆನಂದಸ್ವರೂಪನೆಂದೂ, (iii) ಮರತ್ಯಯವಾದ ಭಯ ಅಶಾಂತಿ ಅಜ್ಞಾನಗಳ ಉದ್ಭವವನ್ನು ನಾಶಮಾಡುವ ಅನಂತ ವೀರ್ಯವಂತನಾದ ಅಮಿತ ವಿಕ್ರಮನಾದ ಭಾರ್ಗವನೆಂದೂ ದರ್ಶಿಸುತ್ತೇನೆ ಎಂದು ಪರಬ್ರಹ್ಮನ ದರ್ಶನ ಕ್ರಮವನ್ನು ಉಪದೇಶಿಸುವುದೇ ಗಾಯತ್ರೀಮಂತ್ರದ ಅರ್ಥ.

ಜೀವಬ್ರಹ್ಮ ಏಕತ್ವ ದರ್ಶನದ ಅನುಷ್ಠಾನ

Undivided Oneness of the Humanity

ಜಗತ್ತಿನಲ್ಲಿನ ಭಯ, ಅಶಾಂತಿ, ಅಜ್ಞಾನ ನಿವಾರಣೆಗೆ ರಹಸ್ಯ ಸಾಧನವಾದ ಅವಿಭಕ್ತವಾದ ಜೀವಬ್ರಹ್ಮರ ಏಕತ್ವ ದರ್ಶನವನ್ನು ಪಡೆಯಲು ನಮ್ಮ ಪೂರ್ವೀಕರಿಂದ ಆಚರಿಸಲ್ಪಡುತ್ತಿದ್ದ ಅಭ್ಯಾಸ ನಿಷ್ಠೆಗಳೇ, ಈಗಲೂ ಪೂರ್ವಸಂಪ್ರದಾಯದ ಗೃಹಸ್ಥ ಗೃಹಿಣಿಯರಿಂದ ಆಚರಿಸಲ್ಪಡುವ ಪಿತೃಭಕ್ತಿ ಮಾತೃಭಕ್ತಿ ಗುರುಭಕ್ತಿ ಪತಿಭಕ್ತಿ ಬ್ರಾಹ್ಮಣಪೂಜೆ, ಬ್ರಾಹ್ಮಣ ಸಮಾರಾಧನೆ ಇತ್ಯಾದಿ ಅನುಷ್ಠಾನಗಳು. ಪಿತೃಭಕ್ತಿ ಎಂದರೆ ಮನುಷ್ಯ ದೇಹದ ಪಿತೃವನ್ನು ಪಿತೃ ಎಂದು ದರ್ಶಿಸುವುದಲ್ಲ, ಪಿತೃವಾದ ಉದ್ದಾಲಕನನ್ನು ಪುತ್ರನಾದ ಶ್ವೇತಕೇತುವು ದರ್ಶಿಸಿದಂತೆ ಪಿತೃವನ್ನೇ ಸಾಕ್ಷಾತ್ತಾದ ಪರಬ್ರಹ್ಮನೆಂದು ದರ್ಶಿಸುವ ಅನುಷ್ಠಾನ. ಮಾತೃಭಕ್ತಿ ಗುರುಭಕ್ತಿ ಪತಿಭಕ್ತಿ ಎಂದರೂ ಮಾತೃ ಗುರು ಪತಿಗಳನ್ನು ಸಾಕ್ಷಾತ್ತಾದ ಪರಬ್ರಹ್ಮನೆಂದು ದರ್ಶಿಸುವ ಅನುಷ್ಠಾನ. ಬ್ರಾಹ್ಮಣಪೂಜೆ ಎಂದರೆ ಮನುಷ್ಯ ದೇಹದ ದ್ವಿಜೋತ್ತಮನನ್ನೇ ಸಾಕ್ಷಾತ್ತಾದ ಪರಬ್ರಹ್ಮನೆಂದು ದರ್ಶಿಸುವ ಅನುಷ್ಠಾನ. ಬ್ರಾಹ್ಮಣರ ಸಮಾರಾಧನೆ ಎಂದರೆ ಸಾಕ್ಷಾತ್ತಾಗ ಅವಿಭಕ್ತನಾದ ಪರಬ್ರಹ್ಮನ ಆರಾಧನೆ ಎಂದು ದರ್ಶಿಸುವ ಅನುಷ್ಠಾನ. ಬ್ರಾಹ್ಮಣ ಗವಿ ಹಸ್ತಿ ಶ್ವಾನ ಶ್ವಪಾಕ ಇತ್ಯಾದಿ ರೂಪಗಳು ಪರಬ್ರಹ್ಮನ ಅನೇಕ ರೂಪಗಳೆಂಬ ದರ್ಶನವು ದಿವ್ಯಚಕ್ಷುಷರಿಗೂ ಜ್ಞಾನಚಕ್ಷುಷರಿಗೂ ಇರುತ್ತದೆ.

ಉಪಸಂಹಾರ

Epilogue

ಮಾನವರಿಗೆ ಅವಿಭಕ್ತವಾದ ಏಕತ್ವ ದರ್ಶನವಿಲ್ಲದೆ ಅಸಮ ವಿಭಕ್ತಿಗಳಿಂದಲೂ ಸಮವಿಭಕ್ತಿಗಳಿಂದಲೂ ದರ್ಶಿಸುತ್ತಿರುವುದೇ ಇಂದಿನ ಜಗತ್ತಿನಲ್ಲಿನ ಅಶಾಂತಿ ಅಸಮಾಧಾನ ಭಯ ವೈಷಮ್ಯ ಘೋರ ಯುದ್ಧಗಳಿಗೆ ರಹಸ್ಯವಾದ ಕಾರಣವಾಗಿರುತ್ತದೆ. ಇಂದಿನ ಜಗತ್ತಿನಲ್ಲಿನ ಮಾನವರು ಜೀವಬ್ರಹ್ಮ ಏಕತ್ವದ ಅನುಷ್ಠಾನದಿಂದ (Undivided oneness) ಅವರ ಹೃದಯಸ್ಥವಾದ ಭಯ, ಅಶಾಂತಿ, ಅಜ್ಞಾನಗಳನ್ನು ನಾಶಮಾಡಿ ವಸಿಷ್ಠ

ವಿಶ್ವಾಮಿತ್ರರಂತೆ ಪುರುಷರ್ಷಭರು (World citizens) ಆಗಬಹುದು. ರಾಕ್ಷಸ ಆಯುಧಗಳು (A and H bombs) ಜಗತ್ತಿನಲ್ಲಿನ ಭಯ ಅಸಮಾಧಾನಗಳ ಉದ್ಭವಕ್ಕೆ ಕಾರಣವಾಗುವದೇ ಹೊರತು ಶಾಂತಿ ಸಮಾಧಾನಗಳನ್ನು ಸ್ಥಾಪಿಸಲು ಸಾಧನಗಳಾಗಿರುವದಿಲ್ಲ. ಇದೇ ಜಗತ್ತಿನಲ್ಲಿನ ಇತರ ರಾಷ್ಟ್ರಗಳಿಗೆ ಭಾರತ ದೇಶವು ಕೊಡುವ ರಹಸ್ಯವಾದ ಸಂದೇಶ.

* * *

The United Nations which is a peace minded world body is at present a bundle of 60 member-nations of diverse disposition of mind professing universal brotherhood of humanity. These member nations should visualise that they are just like head, hands, legs, feet, etc., etc., of the undivided "Visvapurusha" of the Indian tradition, and work in unison with each other and the world body. World body can be administered only by "Visvapurushas" of the type of Sri Rama, Vasista, Viswamitra, who possess Sastraic vision of THE WORLD, THE GOD AND THE MAN and not by the "deplomats" of Ravana type having faith only in the deadly Hydrogen and Nitrogen bombs as contribution to peace. Visvapurusha (World citizen) is Para Brahman in man's body and is not a deplomat in man's body.

ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿ

೧. ವಿಜ್ಞಾನಿಗಳಾದ ಉದ್ದಾಲಕ–ಶ್ವೇತಕೇತುಗಳಿಂದಲೂ, ವಸಿಷ್ಠ ವಿಶ್ವಾಮಿತ್ರರಿಂದಲೂ ನಾವು ಗ್ರಹಿಸಬೇಕಾದ ರಹಸ್ಯಗಳೇನು? ಭಯ, ಅಶಾಂತಿ, ಅಜ್ಞಾನ ನಿವಾರಣೆ ಆಗುವುದು ಹೇಗೆ?

೨. ರಾಕ್ಷಸರಿಗೂ ಪುರುಷರ್ಷಭರಿಗೂ ಇರುವ ವ್ಯತ್ಯಾಸವೇನು?

375–54. ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರವರಾದ
ಸಿ. ವಾಸುದೇವರಾಯರವರು ಮುದ್ರಿಸಿರುವರು.

ಗೀತಾಚಾರ್ಯನ ಪರಬ್ರಹ್ಮೋಪದೇಶ

Approved by His Holiness Sri Sri Chandrasekhara Bharati Swamyji of Sringeri Mutt, Sringeri as a book suitable to lovers of knowledge, the contents of the book being in accordance with Sastras.

Origina' Price : Rs. 2–8–0
Reduced Price : Rs. 1–8–0

K. VENKATARAMAIAH,
119-150, Sixth Cross, 5th Main,
Chamarajpet, BANGALORE 2.

[Approved by the Director of Public Instruction in Mysore as reference book for the teachers of High and Middle Schools, in F.Dis. GL 36539/51–52, dated 25th March 1952.]

The Book can also be had at:

The Bangalore Press Show Room, Avenue Road, Bangalore 2.

ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ೨.

Lekhaka Sahakara Sangha Co-operative Society Buildings, Bangalore 4.

S. S. N. Book Depot, 34, City Market, Bangalore 2.

Sri Kumara Stores, 219, Third Main Road, Chamarajpet, Bangalore 2.

ಬೆಂಗಳೂರು ಪ್ರೆಸ್, ಬೆಂಗಳೂರು ಸಿಟಿ